7. ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಅಲ್ಪ ಕಾಲಾವಧಿ ಚರ್ಚೆ

1. ವಿಷಯ : ರಾಜ್ಯದ ಹಲವಾರು ಜಿಲ್ಲೆಗಳಲ್ಲಿ ಸರ್ಕಾರಿ ಜಮೀನುಗಳನ್ನು ಒತ್ತುವರಿ ಮಾಡಿಕೊಂಡು ವ್ಯವಸಾಯ ಮಾಡುತ್ತಿರುವ ಸಣ್ಣ ರೈತರುಗಳನ್ನು ತೆರವುಗೊಳಿಸುತ್ತಿರುವ ಬಗ್ಗೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಶಿರಸಿ):– ಮಾನ್ಯ ಉಪಾಧ್ಯಕ್ಷರೆ, ಈ ವಿಷಯವನ್ನು ನಾವು ನಿಲುವಳಿ ಸೂಚನೆ ಮೂಲಕ ಪ್ರಾರಂಭದಲ್ಲಿ ಮಂಡಿಸಿದ್ದು, ಇವತ್ತು ತಾವು ನಿಯಮ 69ರ ಮೇರೆಗೆ ಅವಕಾಶ ಕೊಟ್ಟಿದ್ದೀರಿ. ರೈತರುಗಳನ್ನು ಜಮೀನುಗಳಿಂದ ತೆರವುಗೊಳಿಸುತ್ತಿರುವ ವಿಚಾರ ಈಗಾಗಲೇ ಇಲ್ಲಿ ಸಾಕಷ್ಟು ಚರ್ಚೆಯಾಗಿದೆ. ಹಾಗಾಗಿ ನಾನು ಮತ್ತೆ ಆ ಯಾವ ಚರ್ಚೆಯ ವಿವರಗಳಿಗೂ ಹೋಗುವುದಿಲ್ಲ. ಸರ್ಕಾರಕ್ಕೆ, ಕಾನೂನು ಸಚಿವರಿಗೆ, ಕಂದಾಯ ಸಚಿವರಿಗೆ ಮತ್ತು ಅರಣ್ಯ ಸಚಿವರಿಗೆ ನಾನು ವಿನಂತಿ ಮಾಡುವದೇನೆಂದರೆ, ನಾನು ಭಾಷಣ ಮಾಡುವುದಿಲ್ಲ, ನನ್ನದು specific pionts ಇದೆ. ನೀವು ಆ specific pionts ಗೆ ಉತ್ತರ ಕೊಟ್ಟುಬಿಟ್ಟರೆ ಸಾಕು. ಬಾಲಸುಬ್ರಮಣಿಯನ್ ವರದಿಯ ಬಗ್ಗೆ ಚರ್ಚೆಯಾಗಿದೆ. ಈ ವರದಿಯನ್ನು ಸರ್ಕಾರ ಒಪ್ಪಿದೆಯೋ, ಇಲ್ಲವೋ, ಅಷ್ಟನ್ನು ಸ್ಪಷ್ಟಪಡಿಸಬೇಕು. ಲಾ ಮಿನಿಸ್ಟರ್‌ರವರೇ, ನಾನು ಭಾಷಣ ಮಾಡುವುದಿಲ್ಲ ಎಂದು ಹೇಳಿದ್ದೇನೆ. ನಮ್ಮ ಕೆಲವು pionts ಇವೆ. ಅವುಗಳಿಗೆ ನೀವು ಉತ್ತರ ಕೊಟ್ಟುಬಿಟ್ಟರೆ ನಮಗೆ ಇನ್ನೇನು ಸಮಸ್ಯೆ ಇರುವುದಿಲ್ಲ. ಬಾಲಸುಬ್ರಮಣಿಯನ್ ವರದಿಯ ಆಧಾರದ ಮೇಲೆಯೇ ಒತ್ತುವರಿ ತೆರವಿನ ವಿಷಯ ಚರ್ಚೆಯಾಗಿದೆ. ಆ ವರದಿಯನ್ನು ಸರ್ಕಾರ ಒಪ್ಪಿದೆಯೋ, ಇಲ್ಲವೋ ಎನ್ನುವುದನ್ನು ನೀವು ಒಂದು ಸಲ ಸ್ಪಷ್ಟಪಡಿಸಬೇಕು. ಒಪ್ಪಿದ್ದರೆ ಒಪ್ಪಿದೆ ಎಂದು ಹೇಳಲಿ, ಇಲ್ಲದಿದ್ದರೆ ಇಲ್ಲ ಎಂದು ಹೇಳಲಿ. ಏಕೆಂದರೆ, A.G. ಯವರು Affidavit ಕೊಟ್ಟಿರುವ ಪರಿಣಾಮವಾಗಿ ಏನೇನೆಲ್ಲ ಆಗಿದೆ ಎನ್ನುವುದು ಮುಂದಿನ ಭಾಗ. A.G. ಯವರು ಸರ್ಕಾರದ ಗಮನಕ್ಕೆ ತಂದಿದ್ದರೋ, ಸರ್ಕಾರದವರು

ಕ್ಯಾಬಿನೆಟ್‌ನಲ್ಲೇನಾದರೂ ಚರ್ಚೆ ಮಾಡಿದ್ದರೋ, ಈ ರೀತಿ Affidavit ಹಾಕಿ ಎಂದು ನೀವು A.G. ಯವರಿಗೆ approval ಕೊಟ್ಟಿದ್ದಿರೋ, ಏನೇನು ಮಾಡಿದ್ದೀರಿ ಎನ್ನುವುದನ್ನು ಸ್ಪಷ್ಟಗೊಳಿಸಬೇಕು. ಏಕೆಂದರೆ A.G. ಯವರು ಬರೀ ಕೆ.ಪಿ.ಎಸ್.ಸಿ. ವಿಷಯದಲ್ಲಿ ಅಷ್ಟೇ ಅಲ್ಲ, ಭಾಷಾ ಮಾಧ್ಯಮದ ವಿಷಯದಲ್ಲಿ ಅಷ್ಟೇ ಅಲ್ಲ, ಒತ್ತುವರಿ ತೆರವುಗೊಳಿಸುವ ವಿಷಯದಲ್ಲೂ ಏನೇನು ಮಾಡಿದ್ದಾರೆ ಎನ್ನುವುದು ನಮಗೆಲ್ಲ ಗೊತ್ತಿದೆ. ಹಾಗಾಗಿ A.G. ಯವರು ಕಾನೂನು ಸಚಿವರಾದ ನಿಮ್ಮ ಹತ್ತಿರವಾದರೂ ಹೇಳಿ, ಕೇಳಿ ಮಾಡುತ್ತಾರೋ, ಮುಖ್ಯಮಂತ್ರಿಗಳ ಜೊತೆಯಾದರೂ ಹೇಳಿ, ಕೇಳಿ ಮಾಡುತ್ತಾರೋ ಎನ್ನುವುದು ನಮಗ್ಯಾರಿಗೂ ಗೊತ್ತಿಲ್ಲ. ತಾವು ಕಾನೂನು ಮಂತ್ರಿ ಎಂದು ಹೇಳಿ ನಿಮ್ಮ ಜೊತೆಗೆ ಚರ್ಚಿಸುತ್ತಾರೆ ಎಂದು ನನಗೇನೂ ಅನ್ನಿಸಿಲ್ಲ. ಏಕೆಂದರೆ, ಅವರು ನಿಮ್ಮನ್ನು ಹೇಳಿ, ಕೇಳಿ ಮಾಡಿದ್ದರೆ? ನೀವು ಈ ರೀತಿ advise ಮಾಡುವುದೇ ಇಲ್ಲ ಎನ್ನುವ ವಿಶ್ವಾಸ ನಮಗಿದೆ. ಮುಖ್ಯಮಂತ್ರಿಗಳ ಗಮನಕ್ಕೂ ಇಲ್ಲ, ಲಾ ಮಿನಿಸ್ಟರ್ ಗಮನಕ್ಕೂ ಇಲ್ಲ. A.G. ಯವರು ಎಲ್ಲರ above ಇದ್ದಾರೆ. ಹೀಗಾಗಿ ಅವರು ಒತ್ತುವರಿಯನ್ನು ತೆರವುಗೊಳಿಸಿ ಕೊಡುತ್ತೇವೆ ಎಂದು ಬರೆದುಕೊಡಿ ಎಂದು ಕಾರ್ಯದರ್ಶಿಗಳಿಗೆ ಹೇಳಿದರು. Contempt of Court ಆಗುತ್ತದೆ ಎಂದ ತಕ್ಷಣ ಈ ಕಾರ್ಯದರ್ಶಿಗಳು ಹೆದರಿ, ರೈತರು ಹಾಳಾಗಿ ಹೋಗುವುದಾದರೆ ಹಾಳಾಗಿ ಹೋಗಲಿ, ನಾವು safe ಆಗಿರೋಣ ಎಂದು ಇವರು A.G. ಯವರಿಗೆ Affidavit ಅನ್ನು ಕೊಟ್ಟರು. A.G. ಯವರು ಅದನ್ನು ಕೋರ್ಟಿಗೆ submit ಮಾಡಿದರು. ಅದರ ಪರಿಣಾಮವಾಗಿ ಇವತ್ತು ಲಕ್ಷಾಂತರ ರೈತರು ಬೀದಿಗೆ ಬೀಳುವಂಥ ಸ್ಥಿತಿ ಬಂದಿದೆ. ಇದಕ್ಕೆಲ್ಲ ಮೂಲಾಧಾರ ಬಾಲಸುಬ್ರಮಣಿಯನ್ ವರದಿ. ಆ ವರದಿಯನ್ನು ಸರ್ಕಾರ ಒಪ್ಪಿದೆಯೋ, ಇಲ್ಲವೋ ಎನ್ನುವುದನ್ನು ಸ್ಪಷ್ಟಪಡಿಸಲಿ. ಕೋರ್ಟಿಗೆ ಹಾಕಿರುವ Affidavit ಅನ್ನು ಹಿಂತೆಗೆದುಕೊಳ್ಳಲು ನೀವು ಏನು ಮಾಡುತ್ತೀರಿ ಎನ್ನುವುದು ಎರಡನೇ point. ಈಗಾಗಲೇ ಕೋರ್ಟಿಗೆ Affidavit ಹಾಕಿಬಿಟ್ಟಿದ್ದಾರೆ. ಅದನ್ನು ಹಿಂತೆಗೆದುಕೊಂಡರೆ ಅಲ್ಲಿ ತಹಶೀಲ್ದಾರರು ರೈತರಿಗೆ ನೋಟೀಸ್ ಕೊಡುವುದು ತಪ್ಪುತ್ತದೆ. ನಮಗೆ ಹೇಳುವವರು ನೀವು ಯಾರ್‍ರೀ ಎಂದು

ತಹಶೀಲ್ದಾರರು ಮಂತ್ರಿಗಳಿಗೆ, ಎಂ.ಎಲ್.ಎ. ಗಳಿಗೆ, ಉಳಿದವರಿಗೆ ಹೇಳುವುದು ತಪ್ಪುತ್ತದೆ. Affidavit ಹಿಂತೆಗೆದುಕೊಂಡು ಬಿಟ್ಟರೆ ಮುಂದಿನ ಹಂತದಲ್ಲಿ ನಮಗೆ ಸರಳವಾಗುತ್ತದೆ. ಹಾಗಾಗಿ, ಎರಡನೆಯ ಅಂಶವೆಂದರೆ ನೀವು ಹೈ ಕೋರ್ಟಿನಲ್ಲಿ ಹಾಕಿರುವ Affidavitಅನ್ನು ಹಿಂತೆಗೆದುಕೊಳ್ಳಬೇಕು. ಅದನ್ನು ಹಿಂತೆಗೆದುಕೊಳ್ಳುತ್ತೀರೋ, ಇಲ್ಲವೋ ಎನ್ನುವುದನ್ನು ನೀವು ಹೇಳಬೇಕು. ಈ ಎರಡು ವಿಷಯಗಳು ಸ್ಪಷ್ಟವಾಗಬೇಕು. ಅದುವರೆಗೆ ತಕ್ಷಣದಲ್ಲಿ ನೀವು ಯಾವುದೇ ನೋಟೀಸನ್ನು ಕೊಡಬೇಡಿ ಮತ್ತು ತೆರವುಗೊಳಿಸುವ ಪ್ರಕ್ರಿಯೆ ಮಾಡಬೇಡಿ ಎಂದು ಮೂರನೆಯದಾಗಿ ಹೇಳಬೇಕು. ಇದನ್ನು ಮೊದಲನೆಯದಾಗಿ ಹೇಳಿದರೂ ತೊಂದರೆಯಿಲ್ಲ. ಅಲ್ಲಿ ನೋಟೀಸ್ ಕೊಡುವುದು, ತೆರವುಗೊಳಿಸುವ ಪ್ರಕ್ರಿಯೆ ಮಾಡುವುದು ಇದ್ಯಾವುದೂ ಆಗಬಾರದು. ಹಾಗಾಗಿ, ತಕ್ಷಣಕ್ಕೆ ಅದನ್ನು ತಡೆಹಿಡಿಯುವುದಕ್ಕೆ ಪ್ರಯತ್ನವನ್ನು ಮಾಡಬೇಕು. ಏಕೆಂದರೆ 10 ಎಕರೆಯೊಳಗಿನ ಸರ್ಕಾರಿ ಭೂಮಿಯನ್ನು ಯಾರೂ ತೆರವುಗೊಳಿಸುವುದಿಲ್ಲ ಎಂದು ಹೈ ಕೋರ್ಟ್ ಸಹಾ ಹೇಳಿದೆ. ಆ ಹಿನ್ನಲೆಯಲ್ಲಿ ಅದನ್ನು ತಡೆಹಿಡಿಯುವುದನ್ನು ಮಾಡಬೇಕು. ಇನ್ನೊಂದು ವಿಚಾರವೆಂದರೆ, ಕಂದಾಯ ಭೂಮಿಗೆ ಸಂಬಂಧಿಸಿದಂತೆ ಹಿಂದೆ ಯಾರು ಫಾರಂ 50, 53 ಯನ್ನು ಕೊಟ್ಟಿರಲಿಲ್ಲ, ಅವರು ಅದನ್ನು ಮತ್ತೊಮ್ಮೆ ಕೊಡುವುದಕ್ಕೆ ಕಾನೂನಿನಲ್ಲಿ ತಿದ್ದುಪಡಿ ಅವಕಾಶ ಮಾಡಿಕೊಡಬೇಕು. ಇದು ನಾಲ್ಕನೇ specific point. ಹಿಂದೆ ಅದು ಬೇರೆಬೇರೆ ಕಾರಣಕ್ಕಾಗಿ ತಿರಸ್ಕಾರ ಆಗಿದೆ ಅಥವಾ ಅವರಿಗೆ ಕೊಡಲಿಕ್ಕೆ ಆಗಲಿಲ್ಲ ಇಂಥವುಗಳೆಲ್ಲಾ ಇವೆ, ನಮಗೆ ಆ ವಿಷಯಗಳೆಲ್ಲ ಗೊತ್ತಿದೆ. ಈ ವಿಷಯ ಚರ್ಚೆಯಾಗಿದೆ. ಆ ಹಿನ್ನಲೆಯಲ್ಲಿ ಅಗತ್ಯವಾದಂಥ ಕಾಯಿದೆಯನ್ನು ತಿದ್ದುಪಡಿ ಮಾಡಿ ಅವರು ಫಾರಂ 50, 53 ಯನ್ನು ಹಾಕಿಕೊಂಡು ಮತ್ತೆ ಅವರು ಅವರ ಭೂಮಿಯನ್ನು ಪಡೆಯುವುದಕ್ಕೆ ಬೇಕಾದಂಥ ಅವಕಾಶವನ್ನು ಮಾಡಿಕೊಡಬೇಕು. ಇನ್ನು ಅರಣ್ಯ ಭೂಮಿ ವಿಷಯದಲ್ಲಿ ಯಾರು ಅರ್ಜಿ ಹಾಕಿಕೊಳ್ಳಲಿಲ್ಲ, ಅವರು ಅರ್ಜಿ ಹಾಕಿಕೊಳ್ಳಲು ಅವಕಾಶ ಕೊಡಬೇಕು. Social Welfare Department ನಿಂದ ಅದಕ್ಕೊಂದು ಸ್ಪಷ್ಟೀಕರಣ ಹೋಗಬೇಕು. ಈಗಾಗಲೇ Village Forest Right Committee

ಮಾಡುವುದು, ಅರ್ಜಿ ತೆಗೆದುಕೊಳ್ಳುವುದು, ದಾಖಲೆ ಪರಿಶೀಲನೆ, ಜಿ.ಪಿ.ಎಸ್. ಮಾಡುವುದು ಇತ್ಯಾದಿ ಪ್ರಕ್ರಿಯೆಗಳೆಲ್ಲವೂ ನಡೆದಿದೆ. ಆದರೆ, ಯಾರಿಗೆ ಅರ್ಜಿ ಮೊದಲು ಕೊಡಲಿಲ್ಲ, ಅವರಿಗೆ last date ಎಂದು ಏನು ಹೇಳಿಕೊಂಡಿತ್ತು, ಆ ರೀತಿ last date ಎಂದು ಕಾಯ್ದೆಯಲ್ಲಿಲ್ಲ, ಎಲ್ಲೂ ಇಲ್ಲ. ಹಾಗಾಗಿ, last date ಇಲ್ಲ ಎನ್ನುವುದನ್ನು ಸ್ಪಷ್ಟಪಡಿಸಿ, Social Welfare Department ನಿಂದ ಅದಕ್ಕೆ last date ಇಲ್ಲ, ಅರ್ಜಿ ತೆಗೆದುಕೊಳ್ಳಬಹುದು ಎನ್ನುವುದಕ್ಕೆ ಸರ್ಕಾರ ಒಂದು ಸ್ಪಷ್ಟೀಕರಣವನ್ನು ಕಳುಹಿಸಬೇಕು. ಇದರ ಜೊತೆಯಲ್ಲಿ ಇನ್ನು ಎರಡು ವಿಷಯಗಳಿವೆ. ಸ್ಥಳೀಯ ಸಂಸ್ಥೆಗಳ ಭೂಮಿ ವಿಷಯ ನಮ್ಮ ಚರ್ಚೆಯಲ್ಲಿ ಇದುವರೆಗೂ ಬರಲಿಲ್ಲ. ಸ್ಥಳೀಯ ಸಂಸ್ಥೆಗಳ ಭೂಮಿ ಇದೆ. ಈಗ ಪಂಚಾಯತ್ ಭೂಮಿ, ಗ್ರಾಮ ಠಾಣಾ ಎಂದು ಇದೆ. ಅದಕ್ಕೆ survey number ಇಲ್ಲ, record ಇಲ್ಲ, ಎಂಥದ್ದೂ ಇಲ್ಲ. ಆದರೆ, ತಲೆತಲಾಂತರಗಳಿಂದ ಗ್ರಾಮ ಠಾಣಾದಲ್ಲಿ ಮನೆ ಕಟ್ಟಿಕೊಂಡಿದ್ದಾರೆ ಅಥವಾ ಬೇರೆ ಬೇರೆ ತಮ್ಮ ಕೃಷಿ ಚಟುವಟಿಕೆ ಮಾಡಿಕೊಂಡಿದ್ದಾರೆ. ಆ ಭೂಮಿ ಬಗ್ಗೆ ತಕರಾರು ಇದೆ. ಸಾಕಷ್ಟು ವಾದವಿವಾದ ಇದೆ. ಅದರ ಬಗ್ಗೆ ಸರ್ಕಾರ ಸ್ಪಷ್ಟ ನಿಲುವನ್ನು ತೆಗೆದುಕೊಳ್ಳುವಂಥ ಒಂದು ಸಂದರ್ಭ ಬರಬೇಕು. ಈಗ ಯಾರ್‍ಯಾರ ಕಬ್ಜಾದಲ್ಲಿದೆಯೋ ಅವರಿಗೆ ಅದರ ಮಾಲೀಕತ್ವ ಸಿಗುವುದಕ್ಕೆ ಬೇಕಾದಂಥ ರೀತಿಯಲ್ಲಿ ಪ್ರಯತ್ನ ಮಾಡಲೇಬೇಕೆನ್ನುವಂಥದ್ದು ಇದೆ. ಇಂಡೀಕರಣ ವಿಷಯಗಳ ಬಗ್ಗೆ ತ್ವರಿಗತಿಯಲ್ಲಿ DC ಗಳು ಅದನ್ನು ವಿಲೇ ಮಾಡುವುದಕ್ಕೆ ಬೇಕಾದಂಥ ನಿರ್ದೇಶನವನ್ನು ಸಹ ಕೊಡುವಂಥ ಅಗತ್ಯತೆ ಇದೆ. ಇಲ್ಲವೆಂದರೆ, ಇಂಡೀಕರಣ ಭಯಂಕರ, ಭಾರೀ ವಿಳಂಬವಾಗುತ್ತಿದೆ. ವಿಳಂಬವಾಗದೇ ಇರುವ ರೀತಿಯಲ್ಲಿ ಇಂಡೀಕರಣದ ಬಗ್ಗೆ ಬಹಳ ಸ್ಪಷ್ಟವಾಗಿ, ತ್ವರಿತಗತಿಯಲ್ಲಿ ನಿರ್ದೇಶನ ಕೊಡಿಸಬೇಕು. ಎಲ್ಲಾ ಕಡೆ ಒಂದೊಂದು Land Settlement Office ಎಂದು ಇದೆ. ಕೆಲವು ಕಡೆ ಕೆಲಸ ಇಲ್ಲದೆ Office ಇದೆ. ಕೆಲಸವಿದ್ದಲ್ಲಿ Office ಇಲ್ಲ. ಹೀಗೆಲ್ಲ ಆಗಿದೆ. ಉದಾಹರಣೆಗೆ, ಉತ್ತರ ಕನ್ನಡ ಜಿಲ್ಲೆಯಲ್ಲಿ Land Settlement Office ನ ಕೆಲಸ ಸಾಕಷ್ಟು ಇದೆ. ಬೇರೆ ಬೇರೆ ಕಡೆ ಕೆಲಸವಿಲ್ಲದೆ Office ಹಾಗೇ ಇರುವುದಿದೆ. ಅಲ್ಲಿ ಕೆಲಸವಿಲ್ಲದೆ, ಸಿಬ್ಬಂದಿ ವರ್ಗವೂ ಖಾಲಿ ಇರುವುದಿದೆ.

ಹಾಗಾಗಿ, Land Settlement Office ಎಲ್ಲೆಲ್ಲಿ ತ್ವರಿತಗತಿಯಲ್ಲಿ ಅಗತ್ಯವಿದೆಯೋ ನಮ್ಮ ಉತ್ತರ ಕನ್ನಡ ಜಿಲ್ಲೆಯಂಥ ಜಿಲ್ಲೆಗೆ ಅಗತ್ಯವಿದೆಯೋ, ಅಲ್ಲಿಗೆ ಅದನ್ನು shift ಮಾಡಿ ಈ ಭೂಮಿ ವಿಷಯದಲ್ಲಿ ತ್ವರಿತ ನಿರ್ಣಯ ತೆಗೆದುಕೊಳ್ಳುವುದಕ್ಕೆ ಬೇಕಾದ ಪ್ರಯತ್ನ ಮಾಡಬೇಕು. Deemed forest, ಇತ್ಯಾದಿ ವಿಷಯಗಳಲ್ಲೆಲ್ಲ ಸಾಕಷ್ಟು ಬೇರೆ ಬೇರೆ ಸಂದರ್ಭಗಳಲ್ಲಿ ಚರ್ಚೆಯಾಗಿದೆ. ಭೂಮಿ ವಿಷಯದಲ್ಲಿ land ಎಂದರೆ Forest land, revenue land or local body land, ಬೇರೆ ಬೇರೆ ರೀತಿಯ land ಗಳದ್ದೇನು ನಮ್ಮದೆಲ್ಲ ಸಮಸ್ಯೆ ಇದೆಯೋ, C & D ಬಂತು, ಉಳಿದಿದ್ದೆಲ್ಲ ಬಂತು, ಈ ಎಲ್ಲಾ land issues ಬಗ್ಗೆ cabinet ನಲ್ಲಿರುವವರಿಗೆ ಪುರುಸೊತ್ತು ಆಗುವುದಿಲ್ಲ. ನಿಜವಾಗಿ ಯಾರಾದರೂ ಜನಪರವಾದ ಕಾಳಜಿ ಇರುವಂಥ ಒಬ್ಬ Senior Officer ಅನ್ನು incharge ಮಾಡಿ, ಎಲ್ಲಾ department ಜೊತೆ co-ordinate ಮಾಡಿ ಈ ಸಮಸ್ಯೆಯನ್ನು ಹೇಗಾದರೂ ಮಾಡಿ ಒಂದು ಸಲ once for all ಬಗೆಹರಿಸುವುದಕ್ಕೆ ಜವಾಬ್ದಾರಿ ಕೊಡಿ. ನಾನು ಹೇಳುತ್ತೇನೆ. ಇದು cabinet sub committee ಯವರಿಗೆ ಆಗುವುದಿಲ್ಲ. ನನ್ನ ಅನುಭವದಿಂದ ಹೇಳುತ್ತೇನೆ. ನಿಮ್ಮೆಲ್ಲರ ಕಷ್ಟ ಸುಖವನ್ನು ನೋಡಿ ನಾನು ಹೇಳುತ್ತಿದ್ದೇನೆ. ಯಾರಾದರೊಬ್ಬ Senior Office ಗೆ ಜವಾಬ್ದಾರಿ ಕೊಡಿ. ಈ land issues ಇವೆಲ್ಲ ಏನಿವೆ ಇವಕ್ಕೆ 25 ಕಾಯ್ದೆಗಳು, 25 court ಆದೇಶಗಳು ಎಲ್ಲಾ ಇವೆ. ಇದನ್ನು ಒಬ್ಬರಿಂದ ನೋಡುವುದಕ್ಕಾಗುವುದಿಲ್ಲ. ಇವತ್ತು ಬಂದ Secretary ನಾಳೆ ಇರುವುದಿಲ್ಲ. ನಾಳೆ ಬಂದ Secretary ನಾಡಿದ್ದು ಇರುವುದಿಲ್ಲ. ಈ Secretary ಗಳು change ಆಗುತ್ತಿರುತ್ತಾರೆ. ಹಾಗಾಗಿ, ಹಿಂದಿನ Secretary ಎಂದು ಹೇಳುತ್ತಾರೆ. ಅವರು ಮತ್ತೊಬ್ಬ Secretary ಎನ್ನುತ್ತಾರೆ. ಒಟ್ಟಾರೆ, ಇದು ಸಮಸ್ಯೆಯ ಗೂಡಾಗಿದೆ. ಹಾಗಾಗಿ, ಯಾರಾದರೊಬ್ಬ Senior Officer ಗೆ ಈ issues ಅನ್ನೆಲ್ಲ settle ಮಾಡುವುದಕ್ಕೆ ನಿಶ್ಚಿತವಾದ ಗಡುವನ್ನು ಕೊಟ್ಟು, ಸಮಯಾವಕಾಶವನ್ನು ಕೊಟ್ಟು ಇದನ್ನು ಬಗೆಹರಿಸುವುದಕ್ಕೆ ಜವಾಬ್ದಾರಿ ಕೊಡಿ. ಅದಕ್ಕೆ cabinet ನವರು ಏನು ಸಲಹೆ ಸೂಚನೆ ಕೊಡಬೇಕೋ ಅವರಿಗೆ ಕೊಡಿ. ಆದರೆ, ಒಬ್ಬ Senior Office ಅನ್ನು ಇದಕ್ಕೆ ಜವಾಬ್ದಾರಿ ಕೊಡುವ ಮೂಲಕ ಮಾಡಬೇಕು.

ಉಳಿದವರು ಸಾಕಷ್ಟು ವಿಷಯಗಳನ್ನು ಮಾತನಾಡಿದ್ದಾರೆ. ಹಾಗಾಗಿ ನಾನು ಇನ್ನು ಹೆಚ್ಚು ಹೇಳುವುದಿಲ್ಲ. ಈ 8–9 ಅಂಶಗಳನ್ನು ನಾನು specific ಆಗಿ ಹೇಳಿದ್ದೇನೆ. ಈ ವಿಷಯದ ಬಗ್ಗೆ ಸರ್ಕಾರ ಉತ್ತರ ಕೊಡುವಾಗ ನೀವು ಉಳಿದೆಲ್ಲರ ಜೊತೆ ಚರ್ಚೆ ಮಾಡಿಕೊಂಡು, ಏಕೆಂದರೆ, ತಾವೊಬ್ಬರೇ ಕೊಡಲಿಕ್ಕಾಗುವುದಿಲ್ಲ, forest ನವರೊಬ್ಬರೇ ಮಾಡಲಿಕ್ಕಾಗುವುದಿಲ್ಲ, revenue ನವರು ಒಂದೆ ಮಾಡಲಿಕ್ಕಾಗುವುದಿಲ್ಲ, ಹಾಗಾಗಿ ಎಲ್ಲರೂ ಜೊತೆ ಸೇರಿಕೊಂಡು ಈ ವಿಷಯಗಳ ಬಗ್ಗೆ ಸ್ಪಷ್ಟ ಉತ್ತರಗಳನ್ನು ನೀವು ಕೊಟ್ಟಾಗ ಮಾತ್ರ ಈ ಸಮಸ್ಯೆಯನ್ನು ಬಗೆಹರಿಸಲಿಕ್ಕೆ ಆಗುತ್ತದೆ. ಹಾಗಾಗಿ, ಒಬ್ಬ ಹಿರಿಯ, ಅನುಭವಿ IAS ಅಧಿಕಾರಿಗೆ ಅಥವಾ ಯಾವುದೇ KAS ಇರಬಹುದು, IAS ಇರಬಹುದು, ಯಾರಾಗಬೇಕೆಂದು ತಾವು ನಿರ್ಧಾರ ಮಾಡಿ. ನೀವು ಜನಪರವಾದಂಥ, ಪ್ರಾಮಾಣಿಕ ಕಾಳಜಿ ಇರುವಂಥ ಅಧಿಕಾರಿಗಳನ್ನು ಹುಡುಕಿ ತೆಗೆಯಬೇಕು. ಅಲ್ಲಿ ಹುಡುಕುವುದೇ ಕಷ್ಟ. ಅಂಥವರನ್ನು ತೆಗೆದು, ಅಂಥವರಿಗೆ ಜವಾಬ್ದಾರಿಯನ್ನು ಕೊಟ್ಟರೆ ನಿಶ್ಚಿತವಾಗಿ ಈ ಸಮಸ್ಯೆಗಳಿಗೆ once for all ಉತ್ತರಗಳು ಸಿಗುತ್ತವೆ. ಆ ದಿಕ್ಕಿನಲ್ಲಿ ತಮ್ಮ ಇಚ್ಛಾಶಕ್ತಿಯನ್ನು ತೋರಿಸಿ, ಈ ಸಮಸ್ಯೆಗಳನ್ನು ಬಗೆಹರಿಸಬೇಕೆಂದು ಆಗ್ರಹಿಸುತ್ತೇವೆ.

ಉಪಾಧ್ಯಕ್ಷರು:– 5 ನಿಮಿಷಗಳಲ್ಲಿ ಮಾತನಾಡಿ.

ಶ್ರೀ ಪಿ. ರಾಜೀವ್:– ನಾನು ಒಂದು ನಿಮಿಷ ಮಾತನಾಡುತ್ತೇನೆ. ವಿಶ್ವೇಶ್ವರ ಹೆಗಡೆ ಕಾಗೇರಿಯವರು ಎಲ್ಲಾ ವಿಷಯಗಳ ಬಗ್ಗೆ ಬೆಳಕನ್ನು ಚೆಲ್ಲಿದ್ದಾರೆ.

(ಗೊಂದಲ)

ಉಪಾಧ್ಯಕ್ಷರು:– ನಿಮಗೆ ಆಮೇಲೆ ಅವಕಾಶ ಕೊಡುತ್ತೇನೆ. ಇಬ್ಬರು ಆದ ಮೇಲೆ ನಿಮಗೆ ಅವಕಾಶ ಕೊಡುತ್ತೇನೆ.

ಶ್ರೀ ಪಿ. ರಾಜೀವ್ (ಕುಡಚಿ):– ರೈತರನ್ನು ತೆರವುಗೊಳಿಸುವಂಥ ಸಮಸ್ಯೆ, ಎಲ್ಲಿಯವರೆಗೆ Karnataka Land Revenue Act, Section 192 (a)

amendment ಮಾಡುವುದಿಲ್ಲವೋ ಅಲ್ಲಿಯವರೆಗೆ ಬಗೆಹರಿಸಲಿಕ್ಕೆ ಸಾಧ್ಯವೇ ಇಲ್ಲ. Section 192 (a) ನಲ್ಲಿ Sub Section 4 ಹೇಳುತ್ತದೆ. Offence: Being a Revenue Officer entrusted with the responsibility of reporting unlawful occupation of Government land or initiating action to remove such unauthorized occupiers fails to report or take action to remove such unlawful occupants, imprisonment for three years and a fine or rupees. ಅಂದರೆ ಕಂದಾಯ ಅಧಿಕಾರಿಗಳಿಗೆ ಈ ಕಾನೂನನ್ನು ಅವರ ಕೈಯಲ್ಲಿ ಕೊಟ್ಟಿದ್ದೇವೆ.

ಶ್ರೀ ಟಿ.ಬಿ. ಜಯಚಂದ್ರ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶು ಸಂಗೋಪನಾ ಸಚಿವರು):- ಅದು ಯಾವಾಗ amendment ಆಗಿರುವುದು ಹೇಳಿ?

ಶ್ರೀ ಪಿ. ರಾಜೀವ್:- Amendment... ಈಗ latest Act ಇರುವಂಥದ್ದು.

ಶ್ರೀ ಟಿ.ಬಿ. ಜಯಚಂದ್ರ:- No.

ಶ್ರೀ ಪಿ. ರಾಜೀವ್:- Amendment ಆಗಿಲ್ಲ. ಇದೇ amendment ಆಗಬೇಕು ಎಂದು ಹೇಳುತ್ತಿರುವುದು. 192 (a) Section ಅನ್ನು . . ..

ಶ್ರೀ ಟಿ.ಬಿ. ಜಯಚಂದ್ರ:- 192 (a) ಇದು ಯಾವಾಗ ಆಗಿದ್ದು?

ಶ್ರೀ ಪಿ. ರಾಜೀವ್:- ಇದು 1984 ನಲ್ಲಾಗಿದೆ. 1964 Karnataka Land Revenue Act 192 (a) ಈ Section ನಲ್ಲಿ Sub Section ಗಳಿವೆ. ಇದನ್ನು ನಾವು ಎಲ್ಲಿಯವರೆಗೆ amendment ಮಾಡುವುದಿಲ್ಲ... ಈಗ revenue ಅಧಿಕಾರಿಗಳಿಗೆ 3 ವರ್ಷ ಶಿಕ್ಷೆ ಇದೆ ಎಂದು ಕಾನೂನು ಬರೆದಿದ್ದೇವೆ. ಇಲ್ಲಿ ಸದನದಲ್ಲಿ ನಾವು ಎಷ್ಟೇ ಮಾತನಾಡಿದರೂ ಕೂಡ ಜೈಲಿಗೆ ನಾವು ಹೋಗುವಂಥವರು ಎಂದು ಹೋಗುತ್ತಾರೆ. ನಾನು ಒಬ್ಬ civilian ಆಗಿ Writ Petition ಅನ್ನು file ಮಾಡುತ್ತೇನೆ. DC, ತಹಶೀಲ್ದಾರ್, AC ಯನ್ನು party ಮಾಡಿ ನಾನು Writ Petition ಹಾಕುತ್ತೇನೆ. ಆಗ DC ಗೆ

High Court notice ಕೊಡುತ್ತದೆ. ನೀವು ಅವರನ್ನು ತೆರವುಗೊಳಿಸಲಿಲ್ಲವೆಂದರೆ, ನಿಮಗೆ 3 ವರ್ಷಗಳ imprisonment ಗೆ order ಮಾಡುತ್ತೇವೆ ಎನ್ನುತ್ತಾರೆ. ಅದಕ್ಕೆ ಏನು amendment ಆಗಬೇಕಾಗಿದೆ? ಇದೇ offence and punishment section ನಲ್ಲಿ amendment ಬೇಕಾಗಿರುವಂಥದ್ದು Serial No. 1, ... unlawfully enters or occupies on any Government land with the intention of holding that Government land in urban area. ಇದನ್ನು ನಾವು ಸೇರಿಸಿದೆವು ಎಂದರೆ, 'in urban area' ಎಂದು ಸೇರಿಸಿದರ ಹೊಲಗಳಲ್ಲಿ ಯಾರು ಅತಿಕ್ರಮವಾಗಿ ಬಹಳಷ್ಟು ವಷಗಳಿಂದ ಮಾಡುತ್ತಾ ಬಂದಿದ್ದಾರೆ ಅವರಗೆ ನಾವು ರಕ್ಷಣೆಯನ್ನು ಕೊಡಲಿಕ್ಕೆ ಸಾಧ್ಯವಿದೆ. ಅದೇ ರೀತಿ Forest Conservation Act amndement ಗೆ ಸುಮಾರು ವರ್ಷಗಳ ಹಿಂದೆ ಈ ಸದನದಿಂದ Central Government ಗೆ ಒಂದು resolution amendment ಆಗಬೇಕೆಂದು ಹೋಗಿದೆ. ಅದು ಯಾವ ಹಂತದಲ್ಲಿದೆ ಎನ್ನುವುದನ್ನು ಈ ಸರ್ಕಾರ ಕೇಂದ್ರ ಸರ್ಕಾರದ ಜೊತೆ ಮಾತನಾಡಿ 1978 ರಿಂದ ಯಾರು ಅರಣ್ಯ ಭೂಮಿಯನ್ನು ಒತ್ತುವರಿ ಮಾಡಿಕೊಂಡು ಬಂದಿದ್ದಾರೆ, ಅವರಿಗೂ ಕೂಡ ರಕ್ಷಣೆ ಕೊಡುವಂಥದಾಗಬೇಕು. Other than ST community ಇದ್ದರೂ ಕೂಡ ಅವರಿಗೆ ರಕ್ಷಣೆ ಕೊಡುವಂಥದ್ದಾಗಬೇಕು ಎನ್ನುವಂಥ resolution, ಪ್ರಸ್ತಾವನೆ ಈ ಸದನದಿಂದ ಕೇಂದ್ರ ಸರ್ಕಾರಕ್ಕೆ ಹೋಗಿದೆ. ಆ ಪ್ರಸ್ತಾವನೆ ಬಗ್ಗೆ ಈ ಸರ್ಕಾರ ಪರಿಶೀಲನೆಯನ್ನು ಮಾಡಿ ಅದನ್ನೂ ಕೂಡ ನಾವು pass ಮಾಡಿಕೊಂಡಾಗ ಮಾತ್ರ ಈ ಬದಲಾವಣೆ ಮಾಡಲಿಕ್ಕೆ ಸಾಧ್ಯ. ಅದಕ್ಕೆ ಇಲ್ಲಿ urban area ಎಂದು ಹೇಳಿ 192 (a) ನಲ್ಲಿ ಸೇರಿಸಿದರೆ ಮಾತ್ರ ನಾವು ರೈತರಿಗೆ ರಕ್ಷಣೆ ಕೊಡಲಿಕ್ಕೆ ಸಾಧ್ಯ.

ಉಪಾಧ್ಯಕ್ಷರು:- ಪುಟ್ಟಣ್ಣಯ್ಯನವರೆ, 5 ನಿಮಿಷಗಳಲ್ಲಿ ಮಾತನಾಡಿ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಮೇಲುಕೋಟೆ):- ಮಾನ್ಯ ಉಪಾಧ್ಯಕ್ಷರೆ, ಎಲ್ಲಾ ಮಾತನಾಡಿರುವುದನ್ನು ಮಾತನಾಡುವುದಿಲ್ಲ. ಯಾವುದೇ ವರದಿ ತಯಾರು ಮಾಡಬೇಕಾದರೆ ಬಾಲಸುಬ್ರಮಣಯನ್ ಆಗಬಹುದು, ಇನ್ನು

ಯಾರೇ ಆಗಬಹುದು, ಕೃಷಿ ಜ್ಞಾನವಿರತಕ್ಕಂಥ ಅಧಿಕಾರಿಗಳನ್ನು ನೇಮಕ ಮಾಡಬೇಕು. ಕೃಷಿ ಜ್ಞಾನ ಇಲ್ಲದೇ ಒತ್ತುವರಿ ಬಗ್ಗೆ ವರದಿ ಕೊಡುವುದಾಗಲಿ, ಆಲೋಚನೆ ಸಾಧ್ಯವಿಲ್ಲ. ಬಿಜೆಪಿಯವರೇನು ಹೇಳುತ್ತಾರೆ, ಯಾವ ಉದ್ದೇಶಕ್ಕೆ ಅವರನ್ನು ಮಾಡಿದೆವು ಎಂದರೆ, ನಗರ ಪ್ರದೇಶದಲ್ಲಿರತಕ್ಕಂಥ ಕೋಟ್ಯಾಂತರ ರೂಪಾಯಿ ಲಪಟಾಯಿಸಿರತಕ್ಕಂಥ ಒತ್ತುವರಿದಾರರ ಬಗ್ಗೆ ಒಂದು ವರದಿ ಕೊಡಿ ಎಂದರೆ, ಅವರು ಸಮಗ್ರ ಕರ್ನಾಟಕದ ವರದಿ ಕೊಟ್ಟರು. ಕರ್ನಾಟಕ ಸರ್ಕಾರ ಅದನ್ನು ನ್ಯಾಯಾಲಯದ ಮುಂದೆ ಇಟ್ಟಾಗ Public Litigation ಹಾಕಿ ಅದನ್ನು ಅನುಷ್ಠಾನಕ್ಕೆ ತರಬೇಕೆಂದು ಮಾಡಿದರು. ಹೌದು. ನಗರ ಪ್ರದೇಶದಲ್ಲಿರುವವರು ಭೂಮಿಯನ್ನು ಕಳ್ಳತನ ಮಾಡಿದ್ದಾರೆ, ಅವರ ಸ್ವಂತಕ್ಕೆ, ಅವರ ಸ್ವಾರ್ಥಕ್ಕೆ building ಕಟ್ಟಿಕೊಂಡು ಸುಖವಾಗಿರುವುದಕ್ಕೆ ಕಳ್ಳತನ ಮಾಡಿದ್ದಾರೆ. 10 ಲಕ್ಷದ 20 ಸಾವಿರ ಎಕರೆ ಭೂಮಿ ಒತ್ತುವರಿ ಮಾಡಿದ್ದಾರಲ್ಲ, ಅದನ್ನು ಸರ್ಕಾರ ಹೇಗೆ ಅಕ್ರಮ ಎನ್ನುತ್ತೀರಿ? Court ನಲ್ಲಿ ವಿಷಯವನ್ನು ಮಂಡನೆ ಮಾಡುವುದರಲ್ಲಿ ಸರ್ಕಾರ failure ಆಗಿದೆ. ಯಾವುದೇ ಭೂಮಿಯನ್ನು 3 ವರ್ಷಗಳ ಬೆಳೆ ಬೆಳೆಯದೇ ಇದ್ದರೆ ಆ ಭೂಮಿಯನ್ನು ತಾವು ಸರ್ಕಾರಿ ಪಡ ಮಾಡಿಕೊಳ್ಳಹುದು ಎಂದು ನೀವೇ ಹೇಳಿದ್ದೀರಿ. ಸರ್ಕಾರದ ಭೂಮಿ ನಿಜವಾಗಿ ನನ್ನಲ್ಲಿರತಕ್ಕಂಥದ್ದು ಅದು ರಾಷ್ಟ್ರದ ಆಸ್ತಿ. ಅದನ್ನು ಬೆಳೆ ಬೆಳೆಯದೇ ಬಿಟ್ಟಿರುವುದು, ತಕ್ಕಲು ಬಿಟ್ಟಿರುವುದು ಭಾರೀ ತಪ್ಪು. ಅದನ್ನು ಸರ್ಕಾರಿ ಪಡ ಎಂದು ಮಾಡುತ್ತೀರಿ. 10 ಲಕ್ಷದ 20 ಸಾವಿರ ಎಕರೆ ಭೂಮಿಯನ್ನು ಅವರು ಯಾರೂ ಭೂಮಿ ಕಳ್ಳತನ ಮಾಡಿ building ಕಟ್ಟಿಕೊಂಡು ಸುಖವಾಗಿಲ್ಲ, 10 ಲಕ್ಷದ 20 ಸಾವಿರ ಎಕರೆಯನ್ನು ರಾಜ್ಯದ ಅಭಿವೃದ್ಧಿಗೋಸ್ಕರ, ಆಹಾರ ಭದ್ರತೆಗೋಸ್ಕರ ಭೂಮಿಗೆ ಹಸಿರು ಸೀರೆಯನ್ನುಡಿಸಿ ಈ ದೇಶಕ್ಕೆ ಅನ್ನ ಕೊಟ್ಟಿದ್ದಾರೆ. ಆ ಭೂಮಿ ಯಾರದ್ದು? ಸರ್ಕಾರದ್ದು. ಸರ್ಕಾರ ತಕ್ಕಲು ಬಿಟ್ಟರೆ ಏನು ಸಮಸ್ಯೆ? ಯಾರು ಭೂಮಿ ಸರಿ ಮಾಡಬೇಕು? ನಾನು ತಕ್ಕಲು ಬಿಟ್ಟರೆ ಸರ್ಕಾರ ವಹಿಸಿಕೊಳ್ಳುತ್ತದೆ. ಸರ್ಕಾರ ಏನೂ ಬೇಸಾಯ ಮಾಡದೆ ಆ ಭೂಮಿಯನ್ನು ಬಿಟ್ಟರೆ ಆ ಭೂಮಿಯನ್ನು ಯಾರು ಸಕ್ರಮ ಮಾಡಬೇಕು? ರೈತರು ನಿಜವಾಗಿಯೂ ಸಕ್ರಮ ಮಾಡಿದ್ದಾರೆ. ಸಕ್ರಮ ಮಾಡಿರುವುದನ್ನು ನೀವು

ಸಕ್ರಮ ಮಾಡಬೇಕಷ್ಟೇ. ಅಕ್ರಮ ಎಂದು ಹೇಗೆ ಹೇಳುತ್ತೀರಿ? ಭೂಗಳ್ಳರು ಎಂದು ಹೇಗೆ ಹೇಳುತ್ತೀರಿ? ತಾನು ಬೆಳೆದಂಥ 10 ಲಕ್ಷದ 20 ಸಾವಿರ ಎಕರೆಯಲ್ಲಿ ವ್ಯವಸಾಯ ಮಾಡಿ ಆಹಾರವನ್ನು ಉತ್ಪಾದನೆ ಮಾಡಿ ಅವನ ಹೆಂಡತಿ ಮಕ್ಕಳಿಗೆ ಇಟ್ಟುಕೊಂಡಿದ್ದಾನೆಯೇ? ಈ ದೇಶಕ್ಕೆ, ಈ ಸಮಾಜಕ್ಕೆ 10 ಲಕ್ಷದ 20 ಸಾವಿರ ಎಕರೆಯನ್ನು ಕೊಟ್ಟಿದ್ದಾನೆ. ಆಹಾರ ಭದ್ರತೆಗೋಸ್ಕರ 10 ಲಕ್ಷದ 20 ಸಾವಿರ ಎಕರೆಯಲ್ಲಿ ಬೆಳೆದಿರುವವನನ್ನು ಭೂಗಳ್ಳರು ಎಂದು ಕರೆಯುತ್ತೀರಿ? ಯಾರು ಭೂಗಳ್ಳರು? ಅದಕ್ಕಾಗಿಯೇ ಯಾವಾಗಲೂ ಕೃಷಿ ಜ್ಞಾನ ಇಲ್ಲವೇ ಇರತಕ್ಕಂಥ ಯಾವುದೇ ವ್ಯಕ್ತಿಯನ್ನು ಒಂದು ವರದಿ ಕೊಡು ಎಂದರೆ ಆಗುವ ಪರಿಣಾಮವೇನು? ಒಂದು ಒಳ್ಳೆಯ ಟಗರನ್ನು ತಯಾರು ಮಾಡಿಬಿಟ್ಟರು. ಆ ಟಗರನ್ನು ಇವರು ತೆಗೆದುಕೊಂಡು ಹೋಗಿ Court ಮುಂದೆ ನಿಲ್ಲಿಸಿದರು. ಯಾರೋ ಒಬ್ಬ PIL ಹಾಕಿದ. ಅವನಿಗೆ ಆರಂಭದ ಜ್ಞಾನ ಇದೆಯೋ, ಇಲ್ಲವೋ ಗೊತ್ತಿಲ್ಲ. ಆ ಟಗರು ಬಂದ ಕೂಡಲೇ ಇವರು ಯಾರ್‍ಯಾರು ಅಕ್ರಮ ಮಾಡಿದ್ದಾರೆ ಅವರಿಗೆಲ್ಲ ಇದನ್ನು ಕರೆದುಕೊಂಡು ಹೋಗಿ ಗುದ್ದಿಸುತ್ತೇವೆಂದು ಹೇಳಿ ಟಗರನ್ನು ಮುಂದಕ್ಕೆ ಬಿಟ್ಟುಕೊಂಡಿರಿ ನೀವು. Hitachi ತೆಗೆದುಕೊಂಡು ಹೊರಟಿದ್ದೀರಿ. ದೊಡ್ಡ ದೊಡ್ಡದಾಗಿ ಒತ್ತರಿಸಿದ್ದಾರಲ್ಲ, ಅವರೆಲ್ಲ abdomen guard ಕಟ್ಟಿಕೊಂಡು ಆರಾಮವಾಗಿದ್ದಾರೆ. Abdomen guard ಎಂದರೆ ಗೊತ್ತಲ್ಲ? Cricket ಆಡುವವರು ಕಟ್ಟಿಕೊಳ್ಳುತ್ತಾರಲ್ಲ, ಹಾಗೆ. ಅವರು ಯಾರಿಗೂ ಟಗರು ಗುದ್ದಿಲ್ಲ. ಈ ರೈತರಿಗೆ abdomen guard ಎಂದರೆ ಏನೆಂದು ಗೊತ್ತಿಲ್ಲ. Hitachi ತೆಗೆದುಕೊಂಡು ಜೊತೆಯಲ್ಲಿ ಕರೆದುಕೊಂಡು ಹೋಗಿ ಗುದ್ದುತ್ತಾ ಇದ್ದೀರಲ್ಲ? ಆಮೇಲೆ, ಅರಣ್ಯ ಮಂತ್ರಿ ಹೇಳುತ್ತಾರೆ, 3 ಎಕರೆ, 5 ಎಕರೆ, ಏನು trench. .. ನಿಮ್ಮ ಮಾತು ಯಾರು ಕೇಳುತ್ತಾರೆ? ಅರಣ್ಯ ಇಲಾಖೆಯ ಅಧಿಕಾರಿಗಳಿಗೇ ಹೇಳಬೇಕು Form No. 50, 53 ಎಂದರೇನು? ನೀನು ಯಾವುದನ್ನು ಮುಟ್ಟಬೇಡ ಎಂದು training ಅವರಿಗೆ ಕೊಡಬೇಕು. ಯಾವ 50, 53 ಗೊತ್ತಿಲ್ಲ. Hitachi ತೆಗೆದುಕೊಂಡು ಟಗರು ಮುಂದೆ ಬಿಟ್ಟುಕೊಂಡು ಹೋಗುತ್ತಿದ್ದಾರೆ. ಆದರೆ, ರೈತರು abdomen guard ಕಟ್ಟಿಕೊಂಡಿಲ್ಲ. (ಸೀದಾ) ನೇರವಾಗಿ ಗುದ್ದುತ್ತಿದ್ದಾರೆ. `ದೊಡ್ಡ ದೊಡ್ಡವರು ಮಾಡಿಕೊಂಡಿದ್ದಾರೆ. ಅವರು

abdomen guard ಕಟ್ಟಿಕೊಂಡಿದ್ದಾರೆ. ಅವರಿಗೆ cricket ಆಡಿ ಭಾರೀ ಅನುಭವವಿದೆ. ಅವರಿಗೆ ಗುದ್ದುತ್ತಾ ಇಲ್ಲ. ಇವರಿಗೆ ಗುದ್ದುತ್ತಿದೆ. ಸರ್ಕಾರ ಮೌನವಾಗಿದೆ. ನಾವು ಹೇಳಿದ್ದೇವೆ, ಆದೇಶ ಕೊಟ್ಟಿದ್ದೇವೆ. Phone ಮೂಲಕ ತಿಳಿಸಿದ್ದೇವೆ. ನೀವು ಏನೂ ಮಾಡಬೇಡಿ ಎಂದು ಹೇಳಿದ್ದೇವೆ. 3 ಎಕರೆಯಿಂದ 5 ಎಕರೆವರೆಗೆ ಮುಟ್ಟಬೇಡ ಎಂದು ಹೇಳಿದ್ದೇವೆ. ಯಾರು ನಿಮ್ಮ ಮಾತು ಕೇಳುತ್ತಿದ್ದಾರೆ? ನಾನು ಕೇಳುತ್ತಿದ್ದೇನೆ. ಸರ್ಕಾರಕ್ಕೆ ಜವಾಬ್ದಾರಿ ಇದೆಯೇ? ಇನ್ನೊಂದು ಸಾರಿ ರೈತರನ್ನು ಭೂಗಳ್ಳರು ಎಂದು ಕರೆಯಬಾರದು ಎಂದು ವ್ಯಾಖ್ಯಾನ ಮಾಡಬೇಕು. ಈ ದೇಶದ ಆಹಾರ ಭದ್ರತೆಗೆ ಅನ್ನ ಕೊಟ್ಟಂಥ ರೈತರನ್ನು ಭೂಗಳ್ಳರು ಎಂದು ಕರೆಯುತ್ತೀರಲ್ಲ, ಇದು ಎಂಥ ದೊಡ್ಡ ಅವಮಾನ ಗೊತ್ತೇ? ಹಾಗಾದರೆ, ಅವರು 10 ಲಕ್ಷದ 20 ಸಾವಿರ ಎಕರೆಯಲ್ಲಿ ರವಿಯವರು ಹೇಳಿದಹಾಗೆ ರಾಗಿ, ಜೋಳ, ಕಬ್ಬು, ತೆಂಗು, ಮಾವು ಬೆಳೆದು ಅವನ ಹೆಂಡತಿ ಮಕ್ಕಳಿಗೆ ಇಟ್ಟುಕೊಂಡಿದ್ದಾರೆಯೇ? ನೀವು ಸಕ್ರಮವನ್ನು ಸಕ್ರಮ ಮಾಡಬೇಕು. ಅಕ್ರಮ ಎಂದು ಏಕೆ ಹೇಳುತ್ತೀರಿ? ನೀವು ಸರ್ಕಾರದವರು ಅಪರಾಧಿಗಳು. ಆ ಭೂಮಿಯನ್ನು ತಕ್ಕಲು ಬಿಟ್ಟು ಈ ದೇಶದ ಆಹಾರ ಭದ್ರತೆಯನ್ನು ನಾಶ ಮಾಡಿರತಕ್ಕಂಥ ಸರ್ಕಾರ ಅಕ್ರಮವನ್ನು ಸಕ್ರಮ ಮಾಡಿ ರೈತರು ಈ ದೇಶಕ್ಕೆ ಅನ್ನ ಕೊಟ್ಟಿದ್ದಾರೆ, ಅವರಿಗೆ ಹೂವಿನ ಹಾರ ಹಾಕಿ ಗೌರವಿಸಬೇಕೇ ಹೊರತು Hitachi ತೆಗೆದುಕೊಂಡು ಹೋಗಿ ಗುದ್ದುತ್ತೀರಲ್ಲ, ಏಕೆ? 6 ಅಡಿ 2 ಅಂಗುಲ ಇದೆ ಎಂದು Hitachi ತೆಗೆದುಕೊಂಡು ಹೋಗಿ ನೀವು Minor Irrigation ನವರು ಗುದ್ದುತ್ತೀರಲ್ಲ. ದಯವಿಟ್ಟು, ಅರ್ಥ ಮಾಡಿಕೊಳ್ಳಬೇಕು. ಹುಡುಗಾಟದ ಕೆಲಸಕ್ಕೋಸ್ಕರ ಈ ತರಹ ರೈತರನ್ನು ಭೂಗಳ್ಳರು ಎಂದು ಕರೆದಿರುವುದು, ಈ ದೇಶದ ದೊಡ್ಡ ಅವಮಾನ, ಆ ಶಬ್ಧವನ್ನು ಕಿತ್ತು ಹಾಕಬೇಕು. ಸರ್ಕಾರಕ್ಕೆ ಪಂಚೇಂದ್ರಿಯಗಳೇನಾದರೂ ಇದ್ದರೆ ನಾಳೆಯಿಂದಲೇ ಯಾವುದಾದರೂ ಇಂದ್ರಿಯ failure ಆಗಿದ್ದರೆ ನಾನೇನೂ ಮಾಡುವುದಕ್ಕಾಗುವುದಿಲ್ಲ. ನಿಮಗೆ ಪಂಚೇಂದ್ರಿಯ ಎಂದು ಏನಾದರೂ ಇದ್ದರೆ ರೈತರನ್ನು ಗೌರವಿಸಬೇಕು ಎನ್ನುವ ಆಸೆ ಇದ್ದರೆ ನಿಮಗೆ ಅನ್ನ ಕೊಟ್ಟಿರುವ ಅನ್ನದಾತನ ರಕ್ಷಣೆ ಮಾಡಬೇಕು ಎಂದು ನಿಮಗೆ

ಯಾವುದಾದರೂ ಕನಸು ಇದ್ದರೆ, ದಯವಿಟ್ಟು ಆ ರೈತರನ್ನು ರಕ್ಷಣೆ ಮಾಡುವುದರಲ್ಲಿ ನಾಳೆಯೇ Hitachi ಯನ್ನು ವಾಪಸ್ ತೆಗೆದುಕೊಂಡು Form No. 50 and 53 ಎಲ್ಲಾ clear ಆದಮೇಲೆ ಸಾವಿರಾರು ಎಕರೆ ಭೂಮಿ ಒತ್ತುವರಿ ಮಾಡಿದ್ದಾರಲ್ಲ, ಅವರನ್ನು ನೀವೇನು ಮಾಡುತ್ತೀರಿ, ಅದನ್ನು ಆಲೋಚನೆ ಮಾಡಿ. ಕೇವಲ ಆದೇಶ, ಸದನದಲ್ಲಿ ಚರ್ಚೆ ಏನೂ ಪ್ರಯೋಜನವಿಲ್ಲ. ಸರ್ಕಾರದಿಂದ correct ಆಗಿ Court convince ಮಾಡಿ. ಏಕೆ ಮಾಡುವುದಕ್ಕಾಗುವುದಿಲ್ಲ? ದೇಶಧ ಆಹಾರ ಭದ್ರತೆಗೆ ಅನ್ನ ಕೊಡತಕ್ಕಂಥ ರೈತರನ್ನು ಒಕ್ಕಲೆಬ್ಬಿಸಿ ಬೀದಿ ಭಿಕಾರಿ ಮಾಡುತ್ತಿದ್ದೀರಲ್ಲ? ಭೂಮಿಗೂ ರೈತನಿಗೂ ಇರುವ ಸಂಬಂಧ ಬೇರೆ. ಭೂಮಿಗೂ ವ್ಯಾಪಾರಸ್ಥನಿಗೂ ಇರುವ ಸಂಬಂಧ ಬೇರೆ? ಭೂಮಿಗೂ ಕೈಗಾರಿಕೆಗೂ ಇರುವ ಸಂಬಂಧ ಬೇರೆ. ಭೂಮಿಗೂ ಸೈಟ್ ಮಾಡಿ ಮಾರುವವನಿಗೂ ಇರತಕ್ಕಂಥ ಸಂಬಂಧ ಬೇರೆ. ಭೂಮಿಯನ್ನು ನಾನು ತಾಯಿ, ನಮ್ಮವ್ವ ಎಂದು ಗುರುತು ಮಾಡಿಕೊಂಡಿದ್ದೇನೆ. Hitachi ಯನ್ನು ತೆಗೆದುಕೊಂಡು ನಮ್ಮವ್ವನಿಗೆ ಗುದ್ದುತ್ತೀರಲ್ಲ? ಇದು ಯಾವ ನ್ಯಾಯ? ಸ್ವಲ್ಪ ಆಲೋಚನೆ ಮಾಡಬೇಕು. ಹುಡುಗಾಟಕ್ಕೆ ಭಾಷಣ ಮಾಡುವುದಕ್ಕೆ ಬಂದಿಲ್ಲ. ಸಮಗ್ರ ರೈತರ ರಕ್ಷಣೆ ಮಾಡತಕ್ಕಂಥ, ಈ ದೇಶಕ್ಕೆ ಅನ್ನ ಕೊಟ್ಟ ಅನ್ನದಾತನನ್ನು ಒಕ್ಕಲೆಬ್ಬಿಸಿ, ಬೀದಿ ಭಿಕಾರಿ ಮಾಡುತ್ತೀದ್ದೀರಲ್ಲ. ಸರ್ಕಾರ ದಯವಿಟ್ಟು, ರೈತರ ಪರವಾಗಿ ನಿಮ್ಮ ಆಲೋಚನೆಗೆ ಇದ್ದರೆ ಮಾಡಿ. ಬೆಂಗಳೂರಿನಲ್ಲಿ ತೆಗೆದುಕೊಂಡು ಹೋಗಿ ಗುದ್ದಿ. ಸಾವಿರಾರು ಕೋಟಿ ರೂಪಾಯಿಗಳ ಲೂಟಿ ಮಾಡಿದ್ದಾರೆ. Hitachi ತೆಗೆದುಕೊಂಡು ಹೋಗಿ ಎಷ್ಟು ಗುದ್ದುತ್ತೀರೋ ಅಷ್ಟು ಗುದ್ದಿ. 2 ಎಕರೆ, 3 ಎಕರೆ ಇರುವವರ ಮೇಲೇಕೆ ಈ ರೀತಿ ಮಾಡುತ್ತೀರಿ? ಮೊನ್ನೆ ಶ್ರೀನಿವಾಸ ಪ್ರಸಾದ್ ರವರು ದೂರವಾಣಿ ಮೂಲಕ ಮಾತನಾಡಿ ಒಬ್ಬ ರೈತನನ್ನು ಉಳಿಸಿಕೊಟ್ಟರು. ನೀವು ದೂರವಾಣಿ ಮೂಲಕ ಮಾತನಾಡಿದ್ದರಿಂದ 20 ಲಕ್ಷ ರೂಪಾಯಿ ಉಳಿಯಿತು. ಇಲ್ಲದಿದ್ದರೆ complete ನಾಶವಾಗುತ್ತಿತ್ತು. ಒಂದು ಕಾಳು ಭತ್ತದಲ್ಲಿ 250 ಕಾಳು, ಒಂದು ಕಾಳು ರಾಗಿಯಲ್ಲಿ 2000 ಕಾಳು ರಾಗಿ ಉತ್ಪಾದನೆ ಮಾಡತಕ್ಕಂಥ ಆ ಮಂತ್ರವಾದಿಯನ್ನೇ ರಕ್ಷಣೆ ಮಾಡುವುದಕ್ಕಾಗದೇ ಇದ್ದಮೇಲೆ ರೈತರು

ರೈತರು ಎಂದು ಏಕೆ ಮಾತನಾಡುತ್ತೀರಿ? ಹೌದು, ಕೆಲವು ಸರ್ಕಾರಿ ಅಧಿಕಾರಿಗಳಿಗೆ ಕೃಷಿ ಜ್ಞಾನವಿಲ್ಲ. ಕೃಷಿ ಎಂದರೇನೆಂದು ಗೊತ್ತಿಲ್ಲ. ಇದೊಂದು ನಾಚಿಕೆಗೇಡಿನ ಸಂಗತಿ. ಸಾವಿರಾರು ವರ್ಷಗಳಿಂದ ಆ ಭೂಮಿಯನ್ನು level ಮಾಡಿ ಅದಕ್ಕೆ ರೂಪ ಕೊಟ್ಟು ಈ ದೇಶದ ಆಹಾರ ಭದ್ರತೆಯನ್ನು ಸೃಷಿ ಮಾಡಿದ ಈ ರೈತರನ್ನು ಭೂಗಳ್ಳರು ಎಂದು ಕರೆಯುವುದು ಈ ಸದನಕ್ಕೇ ದೊಡ್ಡ ಅವಮಾನ. ಯಾರು ವರದಿ ಕೊಟ್ಟಿದ್ದಾರೆ, ಅವರು ಕರೆದಿದ್ದಾರೆ. Court, ಭೂಗಳ್ಳರು, ಎಲ್ಲರನ್ನೂ ಹೊರಗೆ ತಳ್ಳಿ ಎಂದು ಹೇಳಿದೆ. ಹೌದು, ನಮ್ಮನ್ನು ಭೂಗಳ್ಳರು ಎಂದೇ ಕರೆದಿರುವುದು. ಮಾನ್ಯ ಕಾನೂನು ಸಚಿವರು ಕಳ್ಳಂಬೆಳ್ಳ ಕ್ಷೇತ್ರದಿಂದ ಬಂದಿದ್ದೀರಿ. ರೈತರು ಭೂಗಳ್ಳರೇ? ಏನು ಸ್ವಾಮಿ?

ಶ್ರೀ ಟಿ.ಬಿ. ಜಯಚಂದ್ರ (ಕಾನೂನು, ಸಂಸದೀಯ ವ್ಯವಹಾರಗಳು, ಪಶು ಸಂಗೋಪನಾ ಸಚಿವರು):– 2007 ರಲ್ಲಿ, 2011 ರಲ್ಲಿ ಮಾಡಿದ ಕಾನೂನಿನಲ್ಲಿರತಕ್ಕಂಥದ್ದು ಅದು. ಮತ್ತೆ ಇನ್ನೇನು ಹೇಳಬೇಕು ಹೇಳಿ?

ಶ್ರೀ ಕೆ.ಜಿ. ಬೋಪಯ್ಯ:– ನೀವು ಏಕೆ ತಕರಾರು ಹಾಕಿಲ್ಲ? ಹಿರೇಮಠ್‌ರವರು ಹಾಕಿದ petition ಗೆ ಸರ್ಕಾರದ ಕಡೆಯಿಂದ ನಿಮ್ಮದೇನು ತಕರಾರು? ತಾವು small and marginal farmers ಅನ್ನು ಮುಟ್ಟುವುದಿಲ್ಲ, ಅವರಿಗೆ ತೊಂದರೆಯಾಗುತ್ತದೆ.. . .

ಶ್ರೀ ಸಿ.ಟಿ. ರವಿ:– ಹಿರೇಮಠ್‌ರವರು ರೈತರನ್ನು ಕಳ್ಳರು ಎಂದರು. ನೀವು ಒಪ್ಪಿಕೊಂಡುಬಿಟ್ಟಿರಿ. Affidavit ಕೊಟ್ಟುಬಿಟ್ಟಿರಿ.

(ಗೊಂದಲ)

ಶ್ರೀ ಕೆ.ಜಿ. ಬೋಪಯ್ಯ:– High Court ನಲ್ಲಿ ನಿಮ್ಮ ವಕೀಲರ ಅಸಡ್ಡೆತನದಿಂದ ಆಗಿರುವುದನ್ನು ನೀವು ಆಗಿದ್ದನ್ನು ಹೇಳುವುದಿಲ್ಲ.

(ಗೊಂದಲ)

ಶ್ರೀ ಕೆ.ಜಿ. ಬೋಪಯ್ಯ:– ನೀವೇಕೆ ಹಾಕಲಿಲ್ಲ?

ಶ್ರೀ ಟಿ.ಬಿ. ಜಯಚಂದ್ರ:- ಪುಟ್ಟಣ್ಣಯ್ಯನವರು ಹೇಳಿದ ಮಾತಿಗೆ, ಭೂಗಳ್ಳರು ಎಂದು ಏಕೆ ಹೇಳುತ್ತಾರೆಂದು ಹೇಳಿದರಲ್ಲ,. ...

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ:- ಕಾನೂನುಗಳು ಆ ರೀತಿಯಾಗಿ ಹೇಳಿದೆಯೇ ವಿನಃ . . . .

ಶ್ರೀ ಕೆ.ಜಿ. ಬೋಪಯ್ಯ:- ಆ ಕಾನೂನು ಮಾಡಿದಾಗ preamble ಏನಿದೆ? ಬೆಂಗಳೂರು ಸುತ್ತಮುತ್ತ ಇರುವವರನ್ನು ಖಾಲಿ ಮಾಡಲಿಕ್ಕೆ ಈ ಕಾನೂನು ಎಂದು ಹೇಳಿದೆ. ಆದರೆ, main Act ಬರುವಾಗ ಇಡೀ ರಾಜ್ಯಕ್ಕೆ ಸೇರಿಸಿಬಿಟ್ಟಿದ್ದಾರೆ. ಅದನ್ನು ಸರಿ ಮಾಡಿ.

ಶ್ರೀ ಟಿ.ಬಿ. ಜಯಚಂದ್ರ:- ನೀವು ಅದನ್ನೇ ಸಲಹೆ ಕೊಡಿ.

ಶ್ರೀ ಕೆ.ಜಿ. ಬೋಪಯ್ಯ:- ಆದರೆ, ಈಗ ಎಲ್ಲವೂ ಬಂದಿದ್ದು ಏಕೆ?

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ:- 2007 ರಲ್ಲಿ Land Revenue Act ಬಂದು Section 192 introduce ಮಾಡಿ ಜೈಲಿಗೆ ಕಳುಹಿಸಬೇಕೆಂದು ಮಾಡಿದ್ದು.

(ಗೊಂದಲ)

ಶ್ರೀ ಕೆ.ಜಿ. ಬೋಪಯ್ಯ:- PIL ಗೆ ನೀವು ಸರಿಯಾಗಿ ಸರ್ಕಾರದ ಕಡೆಯಿಂದ ವಾದ ಮಾಡಿದ್ದರೆ ಆಗುತ್ತಿತ್ತು. ಇವತ್ತು ಆ Amicus Curie ವಾದ ಮಾಡಿದ್ದರ ಪರಿಣಾಮ 5 ಎಕರೆಯನ್ನು ಮುಟ್ಟಬಾರದು ಎಂದು ಬಂತು. ನಿಮ್ಮ ಸರ್ಕಾರದ ಕಡೆಯ ವಕೀಲರು High Court ಮುಂದೆ ಒಂದು ಶಬ್ಧವನ್ನಾದರೂ ಮಾತನಾಡಿದ್ದಾರೆಯೇ? ನೀವು ಆ judgment ಅನ್ನು ತೆಗೆದು ನೋಡಿ. ನೀವೇಕೆ ಮಾಡಲಿಲ್ಲ? ಅವರು ನಿಮ್ಮನ್ನೇ ಕೇಳಲಿಲ್ಲ. ನೀವು ಕಾನೂನು ಮಂತ್ರಿ ಇದ್ದೀರಿ. High Court ಗೇನು objection ಹಾಕಬೇಕು, affidavit ಅಂದು ವಿರೋಧ ಪಕ್ಷದ ನಾಯಕರು ಓದಿದರು, ನಿಮ್ಮ ಗಮನಕ್ಕೆ ತಂದಿದ್ದಾರೆಯೇ? ಆ ಅಧಿಕಾರಿ ಮೇಲೆ ಕ್ರಮ ತೆಗೆದುಕೊಳ್ಳಿ. ಎಲ್ಲವೂ

ಸರಿಯಾಗುತ್ತದೆ. ಹತ್ತಾರು ಜನರ ಜೀವನದ ಪ್ರಶ್ನೆ. ಈಗ ಪುಟ್ಟಣ್ಣಯ್ಯನವರು ಹೇಳಿದಹಾಗೆ ಅದಕ್ಕೊಂದು affidavit ಹಾಕುವಾಗ ಕಾನೂನು ಮಂತ್ರಿಯವರ ಗಮನಕ್ಕೂ ತರುವುದಿಲ್ಲ, ಕಂದಾಯ ಮಂತ್ರಿಯವರ ಗಮನಕ್ಕೂ ತರದೇ ಇವರು ಸರ್ವಾಧಿಕಾರತನದಿಂದ ಇವತ್ತು High Court ಮುಂದೆ ಪ್ರಮಾಣ ಪತ್ರ ಹಾಕುತ್ತಾರೆಂದರೆ ಈ ಅಧಿಕಾರಿಗಳನ್ನು ಏನು ಮಾಡಬೇಕು? ನೀವು ಕ್ರಮ ತೆಗೆದುಕೊಳ್ಳಿ. ಒಬ್ಬ ಅಧಿಕಾರಿಯ ಮೇಲಾದರೂ ಕ್ರಮ ತೆಗೆದುಕೊಳ್ಳಿ. ಇಂಥ sensitive, serious matter ಇದ್ದಾಗಲೂ ಮಂತ್ರಿಗಳ ಗಮನಕ್ಕೇ ಇಲ್ಲವೆಂದಮೇಲೆ ಮತ್ತೆ ಈ ಕಾನೂನು ಇಲಾಖೆ ಏಕೆ? ಈಗ ಬಂದಿದೆಯಷ್ಟೇ. ಇದು ಮೊದಲಿನಿಂದಲೂ ನಡೆದುಕೊಂಡು ಬಂದಿರುವುದು.

ಶ್ರೀ ಕೆ.ಆರ್. ರಮೇಶ್‌ಕುಮಾರ್:- ಬೋಪಯ್ಯನವರೆ, ಪುಟ್ಟಣ್ಣಯ್ಯನವರೆ, ಇಲ್ಲಿ 2-3 ಸಲ ಚರ್ಚೆಯಾಗಿದೆ. ಯಾರು ಸಾರ್ವಜನಿಕ ಹಿತಾಸಕ್ತಿಯ ಮೊಕದ್ದಮೆಯನ್ನು ದಾಖಲಿಸಿದವರು? ಅವರೇನಾದರೂ ಊರಿನಲ್ಲಿದ್ದು ಜಮೀನನ್ನು ನಂಬಿಕೊಂಡು ಬದುಕುತ್ತಾರೆಯೇ? ಅವರು voluntary organization ನಡೆಸುವವರು. ಅವರಿಗೆ ಹಣ ಎಲ್ಲಿಂದ ಬರುವುದು? ಅವರು ವಿದೇಶಗಳಿಂದ ತಂದಿರತಕ್ಕಂಥ ಹಣವನ್ನು ಖರ್ಚು ಮಾಡಿರತಕ್ಕಂಥದ್ದು ಏನು ಆ ಕಾಯ್ದೆ ಕೇಂದ್ರ ಸರ್ಕಾರ ರೂಪಿಸಿರತಕ್ಕಂಥದ್ದು ಇದೆ, ಅದನ್ನು ಉಲ್ಲಂಘಿಸಿದ್ದಾರೆಂದು ಅವರೇ ನೇಮಕ ಮಾಡಿಕೊಂಡಿರತಕ್ಕಂಥ Chartered Accountant ಹೇಳಿರುವುದನ್ನು ಈ ಸದನದಲ್ಲಿ ನಾನು ಕೊಟ್ಟೆ, ಆತ ಯಾವ್ಯಾವ ರೀತಿ ಮಾಡಿದ್ದಾನೆ ಎಂದು ಕೊಟ್ಟೆ. ಇವರು ಏನು ಮಾಡಿದರು Enforcement Directorate ಗೆ ಬರೆಯಬೇಕಾಗಿತ್ತು. ಅಥವಾ Ministry of Finance ಗೆ ಬರೆಯಬೇಕಾಗಿತ್ತು. ಅದರ ಬದಲು Internal Security Department (ISD) ಗೆ ಬರೆದರು. ಅವರಿಗೆ ಅಧಿಕಾರವೇ ಇಲ್ಲ. ಆತ ದಿವಸಕ್ಕೆ ಒಂದು ಸಲ TV ಮುಂದೆ appear ಆಗುತ್ತಾನೆ. ನಮ್ಮ ಮಾಧ್ಯಮಗಳು ಆತನನ್ನು ಬಹಳ ದೊಡ್ಡ crusader ಮಾಡಿ ಬಿಟ್ಟಿದ್ದಾರೆ. ಆತ ಇಲ್ಲಿದ್ದು defend ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲ, ಆದ್ದರಿಂದ ಹೆಚ್ಚು allegation ಆತನ ಮೇಲೆ ನಾನು

ಮಾಡುವುದಿಲ್ಲ. ಇವರು ಯಾವ ತರಹ sensationalize ಮಾಡಿದರು ಎಂದರೆ, ಎಲ್ಲರೂ ಸೇರಿ encroachment ಮಾಡಿ ಬಿಟ್ಟಿದ್ದಾರೆ. ನಾನು ಆ ದಿವಸ ಇದೇ ಸದನದಲ್ಲಿ dictionary ತಂದು ಇಲ್ಲಿಟ್ಟುಕೊಂಡು definition ಓದಿ ಹೇಳಿದ್ದೇನೆ. Encroachment ಎಂದರೆ, ಒತ್ತುವರಿ ಎಂದರೆ, ಬಲಾಢ್ಯ, ಪ್ರಜ್ಞಾಪೂರ್ವಕವಾಗಿ ಕಾನೂನನ್ನು ಉಲ್ಲಂಘನೆ ಮಾಡುತ್ತೇನೆ ಎನ್ನತಕ್ಕಂಥ ಧೈರ್ಯ ಇರತಕ್ಕಂಥವನು, ಈ ಕಾನೂನು ನನ್ನನೇನು ಮಾಡುತ್ತದೆ ಇದನ್ನೆಲ್ಲಾ ಕೊಂಡುಕೊಳ್ಳುತ್ತೇನೆ ಎನ್ನುವ ದುರಹಂಕಾರ ಇರುವವನು ಮಾಡತಕ್ಕಂಥದ್ದು encroachment. ನಿರ್ಗತಿಕ ಆಗಿರತಕ್ಕಂಥವನು, ಅಸಹಾಯಕನಾಗಿರತಕ್ಕಂಥವನು, ಬೇರೆ ಯಾವುದೇ ಮಾರ್ಗವಿಲ್ಲದೆ unauthorized occupation ಮಾಡುತ್ತಾನೆ. ಅದಕ್ಕೆ ನಾವು Form-53 ನ್ನು introduce ಮಾಡಿದ್ದು.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:– ಅದು unauthorized ಅಲ್ಲ ಸಾರ್.

ಶ್ರೀ ಕೆ.ಆರ್. ರಮೇಶ್‌ಕುಮಾರ್:– ಅಲ್ಲ. ಅನಧಿಕೃತವಾಗಿ ಸರ್ಕಾರಿ ಭೂಮಿಯನ್ನು ಬಡವ ಹಿಡಿದುಕೊಂಡಿರುವುದನ್ನು ಅನಧಿಕೃ ಸಾಗುವಳಿ ಎಂದು ಹೇಳುತ್ತೇವೆ. ಇವರು ಅದ್ಯಾವುದು ಇದ್ಯಾವುದು ಎಂದು ಹೇಳದೆ ಬೆಂಗಳೂರು ಸಿಟಿ ಮಧ್ಯದಲ್ಲಿರತಕ್ಕಂಥ ಕೋಟ್ಯಾಂತ ರೂಪಾಯಿ ಬೆಲೆ ಬಾಳತಕ್ಕಂಥದ್ದು, ಮೈಸೂರಿನಲ್ಲಿ ಇರತಕ್ಕಂಥದ್ದನ್ನು, ಬೆಳಗಾವಿಯಲ್ಲಿ ಇರತಕ್ಕಂಥದ್ದನ್ನು ನುಂಗಿ ಹಾಕಿದವರನ್ನು ಹಿಡಿದುಕೊಳುವುದನ್ನು ಬಿಟ್ಟು ಅರ್ಧ ಎಕರೆ ಮುಕ್ಕಾಲು ಎಕರೆ ಒಂದೂಕಾಲ ಎಕರೆ ಹಿಡಿದುಕೊಂಡವರ ಜೀವದ ಮೇಲೆ ಬೀಳುತ್ತಾರೆ. Court ನಲ್ಲಿರತಕ್ಕಂಥವರಿಗೆ ಇದೆಲ್ಲಾ ಕೂಡ ರಾಜಕಾರಣಿಗಳಿಂದಲೇ ಆಗತಕ್ಕಂಥದ್ದು ಇವರನ್ನು ಬಲಿ ಹಾಕಿ ಬಿಟ್ಟರೆ ಈ ದೇಶವೆಲ್ಲಾ ಬಹಳ clean ಆಗಿ ಬಿಡುತ್ತದೆ ಎಂದು ಹೇಳಿ, ಅವರು ತಮ್ಮದೆ ಆದ ಗುಂಗಿನಲ್ಲಿ ಅವರೊಂದು order ಮಾಡುತ್ತಾರೆ. Officers are not at fault. ಬಾಯಿಗೆ ಬಂದ ಹಾಗೆ ಬಯ್ಯುತ್ತಾರೆ. It is judicial tyranny. I have the guts to say this, they become helpless. Court ನಲ್ಲಿ ಅಧಿಕಾರಿಗಳ ಮೇಲೆ ಎಂಥ ಭಾಷೆ ಉಪಯೋಗಿಸಿ ಬಿಡುತ್ತಾರೆಂದರೆ, ಇವರಿಗೆ ಭಯ

ಪಾಪ. ಈ ಬಾಲಸುಬ್ರಮಣಿಯನ್ ವರದಿಯನ್ನು ಸರಕಾರ ಒಪ್ಪಿತ್ತೊ ಇಲ್ಲವೊ ಎಂದು ಇವತ್ತಿನವರೆವಿಗೂ ಇತ್ಯರ್ಥವಾಗಿಲ್ಲ. ಅದು ಇತ್ಯರ್ಥವಾಗಿಲ್ಲದಿರುವಾಗ . . . That is what I am telling. ಇವರು ಅಧಿಕಾರಿಗಳು ಭಯ ಬಿದ್ದು ಹೋಗಿ affidavit file ಮಾಡಿಬಿಡುತ್ತಾರೆ. ಹಾಗಾದರೆ governance ಇದೆಯೇ?

(ಗೊಂದಲ)

ಶ್ರೀ ಕೆ.ಜಿ. ಬೋಪಯ್ಯ:- ನೀವು ಹೋಗಿ court ಮುಂದೆ ಹೇಳಲಿಲ್ಲ. ನಾವು ಇರುವಾಗ ಯಾವುದೇ case ಇರಲಿಲ್ಲ. ಅದು 2013 case. I will give you documents.

(ಗೊಂದಲ)

ಶ್ರೀ ವಿ. ಶ್ರೀನಿವಾಸ ಪ್ರಸಾದ್:- Reject ಮಾಡಿ ಎಂದು ಹೇಳಿ ನಿಮ್ಮ ಕಾಲದಲ್ಲಿ ಕೊಟ್ಟಿದ್ದು. ಡಾ॥ ಬಾಲಸುಬ್ರಮಣಿಯನ್ ರವರು ವರದಿ ಕೊಟ್ಟಿದ್ದು.

(ಗೊಂದಲ)

ಶ್ರೀ ಕೆ.ಜಿ. ಬೋಪಯ್ಯ:- ಸನ್ಮಾನ್ಯ ಕಂದಾಯ ಸಚಿವರೇ, ನಾವು ಇದ್ದಾಗ ಯಾವುದೇ Pil ಇರಲಿಲ್ಲ. ಇದ್ದದ್ದು 2013 ನಲ್ಲಿ.

(ಗೊಂದಲ)

ಶ್ರೀ ಕೆ.ಆರ್. ರಮೇಶ್‌ಕುಮಾರ್:- ಬೋಪಯ್ಯನವರೆ ಒಂದು ನಿಮಿಷ. ನಾನು ಏನು ಹೇಳುತ್ತೇನೆಂದರೆ, ಅವರು ಮಾಡಿದರೂ ಇವರು ಮಾಡಿದರೂ that is a different thing. ಒಂದು ವರದಿಯನ್ನು ಒಪ್ಪಿದ್ದಾರೊ ಒಪ್ಪಿಲ್ಲವೊ ಎನ್ನತಕ್ಕಂಥದ್ದೇ ಇನ್ನು ನಿರ್ಣಯ ಆಗದೇ ಇದ್ದಾಗ, ಅವರು ಬೇಕಾದ್ದು ಮಾತನಾಡಿರಬಹುದು. ನಾವು ಅವರ ವರದಿಯನ್ನು implement ಮಾಡುತ್ತೇವೆಂದು ಇವರು affidavit file ಮಾಡಿದರೆ ಅಲ್ಲಿಗೆ ಯಾರು who is administrating? ಯಾರು ಆಡಳಿತ ನಡೆಸತಕ್ಕಂಥವರು? High Court? ಅಥವಾ Officers? ಅಥವಾ retire ಆಗಿ ಮನೆಯಲ್ಲಿ ಕುಳಿತಿರುವ

ಬಾಲಸುಬ್ರಮಣಿಯನ್? ಯಾರು ನಡೆಸುತ್ತಿರುವವರು? ಇದರ after effects ಯಾರಿಗೆ ಹೊಡೆಯತಕ್ಕಂಥದ್ದು? Time and again ನಾವು ನಾಚಿಗೆ ಬಿಟ್ಟಿದ್ದು ಇದು ಬಹಳ ದೊಡ್ಡ ವಿಷಯ. This gentleman, who is the Chairman ನನ್ನ ಜಮೀನಿಗೆ ಬಂದರು. ನನಗೆ notice ಕೊಡಲಿಲ್ಲ. ನಾನು ತಾನೆ ಅಪರಾಧಿ? He did not serve the notice on me. ನಾನು ನನ್ನ ತೋಟದಲ್ಲಿ ಕುಳಿತ್ತಿದ್ದೆ. 71 vehicles, ಅಧ್ಯಕ್ಷರೆ, ಅವರು ನನ್ನ ತೋಟದಲ್ಲಿ ಎಷ್ಟು ಹೊತ್ತು ಇದ್ದರು ಗೊತ್ತೆ? Two and a half minutes. ನನ್ನ ದಾಖಲೆ ನೋಡಲಿಲ್ಲ, ನನಗೆ notice ಕೊಡಲಿಲ್ಲ, ಯಾವ ಸರಹದ್ದು ಎಲ್ಲಿಗೆ ಬರುತ್ತದೆ ಯಾವ survey number ಎಂದು ವಿಚಾರಣೆ ಮಾಡಲಿಲ್ಲ. ಹೋಗಿ ಬಾಯಿಗೆ ಬಂದಿದ್ದನ್ನೆಲ್ಲಾ press ಗೆ ಹೇಳಿಬಿಟ್ಟು ಹೊರಟು ಬಿಟ್ಟರು. Court ನಲ್ಲಿ judgment ಬಂದ ಮೇಲೂ ಕೂಡ he makes a statement to press ಆತ ಪ್ರಾಮಾಣಿಕ ಅಲ್ಲವೆಂದು ನಾನು ಹೇಳುವುದೇ ಇಲ್ಲ. ಒಬ್ಬ ಮನುಷ್ಯನಿಗೆ ದುರಹಂಕಾರ ಅಷ್ಟು ಇರಬಾರದು. ಈತ ಪ್ರಾಮಾಣಿಕನಾಗಿದ್ದರೆ ಇವರಪ್ಪನಂಥ ಪ್ರಾಮಾಣಿಕರು ನಾವು. There are more opportunities for us to become corrupt. But we have withstood the temptation. He cannot have that arrogance to say that he is the only honest man. ನಾನು ಅವರ office ಗೆ ಹೋದೆ. ಪುಟ್ಟಣ್ಣಯ್ಯನವರೆ ನಾನು ಒಂದು ಗಂಟೆಯ ಹೊತ್ತು ಅಲ್ಲಿ ಕುಳಿತ್ತಿದ್ದೆ. He did not grant me an interview. ಇವರೆಲ್ಲ ಎಂಥವರು ಎಂದರೆ, they are not normal human beings. ಏನೋ ಒಂದು ವಿಚಿತ್ರ. ಈತ, ಹಿರೇಮಠ್ even today, I appeal go Government. ರಾಜ್ಯದ ಜನರಿಗೆ ಆತನ ಚಟುವಟಿಕೆ ಏನು, ಈತನ ಮೂಲ ಏನು, ಈತನ ಕುಟುಂಬ ಯಾವುದು, ಈತನಿಗೆ ಹಣ ಯಾವ್ಯಾವ ಸಂಸ್ಥೆಯಿಂದ ಬಂದಿದೆ, ಈತ ವರ್ಷದಲ್ಲಿ ಎಷ್ಟೆಷ್ಟು ದಿವಸ ಎಲ್ಲೆಲ್ಲಿ ಇರುತ್ತಾನೆ, ಎಷ್ಟು ಜನಕ್ಕೆ ಲೆಕ್ಕ ಕೊಟ್ಟಿದ್ದಾನೆ, ಆ Chartered Accountant ಏನು ಹೇಳಿದ್ದಾರೆ, ಅದರ ಮೇಲೆ ನೀವು ಏನು ಕ್ರಮ ಜರುಗಿಸಿದ್ದೀರಿ ಎಂಬುದು ಗೊತ್ತಾಗಲಿ. ಎಷ್ಟೊಂದು ಜನ ನರುಳುತ್ತಿದ್ದರೆ ನಿಮಗೆ ಇದು ದೊಡ್ಡ ವಿಚಾರ ಆಗುವುದಿಲ್ಲವೆ, ಆತನ ವಿಚಾರದಲ್ಲಿ ಮಾತ್ರ ನೀವು

ನೆಮ್ಮದಿಯಿಂದ ಮಲಗುತ್ತೀರಾ? ನಾವು ಪ್ರಾಮಾಣಿಕತೆಯಿಂದ ಬದುಕುತಕ್ಕಂಥವರೇ, ಒಂದೊಂದು ಸಲ ಒಂದೊಂದು TV, paper ನಲ್ಲಿ ಬಂದಾಗ ನಾವು ಅಪರಾಧ ಮಾಡಿದ್ದೇವೆ, ಸರಕಾರದ ಜಮೀನು ಕದ್ದು ಬಿಟ್ಟಿದ್ದೇವೆ, ಒತ್ತುವರಿ ಮಾಡಿಬಿಟ್ಟಿದ್ದೇವೆಂದಾಗ ನಮ್ಮ ಕುಟುಂಬಗಳು ಎಷ್ಟು ಕಣ್ಣೀರು ಹಾಕಿರುತ್ತಾರೆ? ಬನ್ನಿ ನನ್ನ ಊರಿಗೆ school ಇರುವುದು ನನ್ನ ಜಾಗದಲ್ಲಿ, hostel ಇರುವುದು ನನ್ನ ಜಾಗದಲ್ಲಿ, hospital ಇರುವುದು ನನ್ನ ಜಾಗದಲ್ಲಿ, ನಾನು ಜಮೀನು ಕಳೆದುಕೊಂಡ ದಿವಸ ನನ್ನ ಯಾವನೂ ಕೇಳಲಿಲ್ಲ. ನಾನು ದಾನ ಕೊಟ್ಟಾಗ ಯಾರು ಕೇಳಲಿಲ್ಲ. ನಾನು ಖರೀದಿಸಿದ ಜಮೀನಿನಲ್ಲಿ ತೋಟ ಮಾಡಿದರೆ ನನಗೆ ಕಳ್ಳ ಎಂದು ಕರೆಯುತ್ತಾರಾ? ಇದೇನಾ ನಮಗೆ certificate? ಇಂಥವರ ಕೈಯಲ್ಲಿ ನಾವು ಕಳ್ಳರು ಎಂದು ಎನ್ನಿಸಿಕೊಳ್ಳಬೇಕು. ಎಲ್ಲಿಗೆ ಹೋಗುತ್ತಿದ್ದೀರಿ? ಹಾಗಾದರೆ ನಿಮ್ಮನ್ನು ಅಂದಾಗ ಮಾತ್ರ ನಿಮಗೆ ಸಿಟ್ಟಾ? ನಾವು ನಿಮ್ಮ colleagues ಅಲ್ಲವೇ? Have you not noticed all these things in the press? ಕನಿಷ್ಟ ಪಕ್ಷ ನಿಮಗೆ ಅನ್ನಿಸುವುದಿಲ್ಲವೇನ್ರಿ? ಸರ್ಕಾರದಲ್ಲಿರತಕ್ಕಂಥವರಿಗೆ ನಾವು ಕೂಡ ಮಾನಸ್ಥರು ನಿಮ್ಮ ಸಹೋದ್ಯೋಗಿಗಳು, ನಿಮ್ಮ ಜೊತೆಗೆ ಕೆಲಸ ಮಾಡುತ್ತಿದ್ದೇವೆ, ನಮ್ಮ ಮೇಲೆ ಈ ತರಹದ ಅನಾವಶ್ಯಕವಾದ ಮಾತುಗಳನ್ನು ಮಾತನಾಡುತ್ತಿದ್ದಾರೆ, ಅಂಥವರು ಹೌದು ಅಲ್ಲವೊ ಎಂದು verification ಆದರೂ ಮಾಡಬಹುದಲ್ಲವೇ? ನಮಗೆ ಯಾವತ್ತಾದರೂ ನೀವು ಸೌಜನ್ಯಕ್ಕಾದರೂ ಒಂದು ಮಾತು ಹೇಳಿದ್ದೀರಾ? Alright, ನಮಗೆ ನಿಮ್ಮ ಮೇಲೆ ಅನುಮಾನವಿದ್ದರೆ you hold an enquiry, you punish us, ಬಿಸಾಕಿ ಬಿಟ್ಟು ಹೋಗುತ್ತೇವೆ ನಾವು ಇಲ್ಲಿಗೆ ಬರುವುದಿಲ್ಲ. ನೀವು ಇವರನ್ನು ಮಹಾ ದೊಡ್ಡ ಮನುಷ್ಯರೆಂದು non-existent persons ಇಟ್ಟುಕೊಂಡು, ರಾಜ್ಯದಲ್ಲಿ ಲಕ್ಷಾಂತರ ಕುಟುಂಬಗಳ ಕಣ್ಣೀರು ಹರಿಸುತ್ತಿದ್ದೀರಿ. This is too much. There should be an end to it. ಕಾನೂನಿನಲ್ಲಿ ಹೇಳುತ್ತದೆ, that is not the explanation Mr. Jayachandra. You are the Hon'ble Law Minister. You can't become helpless. ನಾವು ತಪ್ಪಿತಸ್ಥರಾದರೆ ನಮಗೆ ರಕ್ಷಣೆ ಕೇಳುವುದಿಲ್ಲ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ಬಿಡಿ ಅವರ ಬಗ್ಗೆ ನೀವು ಅಷ್ಟೊಂದು ಜೋರಾಗಿ ಮಾತನಾಡಬೇಕೆ, ಬಂಡೆ ಇದ್ದ ಹಾಗೆ ಇರಿ, ನೂರಾರು ನಾಯಿಗಳು ಉಚ್ಚೆ ಉಯ್ಯುತ್ತವೆ ಸಂಜೆಯ ಹೊತ್ತಿಗೆ ಒಣಗಿ ಹೋಗುತ್ತದೆ ಅದಕ್ಯಾಕೆ ನೀವು ತಲೆ ಕೆಡಿಸಿಕೊಳ್ಳುತ್ತೀರಿ?

ಶ್ರೀ ಎನ್.ಹೆಚ್. ಕೋನರೆಡ್ಡಿ:- ಮಾನ್ಯ ರಮೇಶ್ ಕುಮಾರ್‌ರವರು ಯಾರಿಗೆ ಹೇಳಿದರೂ ಗೊತ್ತಾಗಲಿಲ್ಲ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ನೀವು ತಲೆ ಕೆಡಿಸಿಕೊಳ್ಳುವುದಕ್ಕೆ ಹೋಗಬೇಡಿ.

ಶ್ರೀ ಎನ್.ಹೆಚ್. ಕೋನರೆಡ್ಡಿ:- ಮಾನ್ಯ ರಮೇಶ್ ಕುಮಾರ್‌ರವರು ಮಾನ್ಯ ಉಪಾಧ್ಯಕ್ಷರಿಗೆ ಹೇಳಿದರೋ ಅಥವಾ ಸರ್ಕಾರಕ್ಕೆ ಹೇಳಿದಿರೋ

ಉಪಾಧ್ಯಕ್ಷರು:- ನೀವು conclude ಮಾಡಿ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ಸನ್ಮಾನ್ಯ ಕಾನೂನು ಮಂತ್ರಿಗಳಿಗೆ ಒಂದು ಪ್ರಶ್ನೆ. ಇಷ್ಟೊಂದು ರೈತರನ್ನು ಒಕ್ಕಲೆಬ್ಬಿಸಲಿಕ್ಕೆ ಹೊರಟಿದ್ದಿರಲ್ಲ, ಬೆಂಗಳೂರು, ಬೆಳಗಾಂ, ಬೀಧರ್, ಗುಲ್ಬರ್ಗಾ, ಎಲ್ಲೆಲ್ಲಿ ಕಳ್ಳರು ಇದ್ದಾರೆ ಅವರಿಗೆ ಯಾವ್ಯಾವ Hitachi ತೆಗೆದುಕೊಂಡು ಹೊರಟಿದ್ದೀರಿ, ಸ್ವಲ್ಪ ವರದಿ ಕೊಡಬೇಕಲ್ಲ. ಅದು ಏನು ಭೂಮಿಗೆ ಅಷ್ಟೊಂದು fast. ಆದ್ದರಿಂದ ತಾವು ಎಲ್ಲರೂ ಯೋಚಿಸಬೇಕು.

ಶ್ರೀ ತನ್ವೀರ್ ಸೇಠ್:- ಆ ಜಮೀನಿನಲ್ಲಿ ಯಾರೂ ಶಕ್ತಿವಂತರಿಲ್ಲ. ಇಲ್ಲ ಬಲಿಷ್ಠರು ಇದ್ದಾರೆ.

ಉಪಾಧ್ಯಕ್ಷರು:- ಪುಟ್ಟಣ್ಣಯ್ಯನವರೆ ಮುಗಿಸಿ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ಆಯಿತು ಸ್ವಾಮಿ ಇನ್ನೊಂದು ನಿಮಿಷದಲ್ಲಿ ಮುಗಿಸುತ್ತೇನೆ. ಇದಕ್ಕೆ ಕಾರಣ ಇಷ್ಟೆ. ಏನೆಂದರೆ, ಸನ್ಮಾನ್ಯ ಉಪಾಧ್ಯಕ್ಷರೆ, ಇದೊಂದು ಬಹಳ ದುರಂತ ಎಂದರೆ, ಭೂಮಿ ಜ್ಞಾನ ಇಲ್ಲದೇ ಇರತಕ್ಕಂಥ ಯಾವುದೇ ವ್ಯಕ್ತಿಯನ್ನು ಒಂದು ವರದಿ ಕೊಡಿ ಎಂದು

ಅವರಿಗೆ ಕೊಡಬಾರದು. ಅವನಿಗೆ ವರದಿ ಕೊಡಬೇಕೆನ್ನುವ ಜ್ಞಾನ ಇದ್ದರೆ ಒಬ್ಬ ಭೂಮಿ ಜ್ಞಾನ ಇರತಕ್ಕಂಥ ಒಬ್ಬ ರೈತನನ್ನು ಅವರ ಜೊತೆಗೆ ಸೇರಿಸಬೇಕು. ಇದು ಬಹಳ ದೊಡ್ಡ ಸಮಸ್ಯೆ. ಬಹಳ ಜನಕ್ಕೆ ಭತ್ತದ ಮರ! ಎಲ್ಲಿ ಇದೆ ಎಂದು ಹೇಳತಕ್ಕಂಥ ಜನ ಇವತ್ತು ಇದ್ದಾರೆ. ಭತ್ತದ ಮರ! ಎಲ್ಲಿದೆ ಎಂದು ಕೇಳುವಂಥ ಜನ ಈ ದೇಶದಲ್ಲಿ ಈ ವರದಿ ಕೊಡುತ್ತಾರೆಂದರೆ ಆಶ್ಚರ್ಯವಾಗುತ್ತದೆ. ದಯವಿಟ್ಟು ನಾಳೆಯೇ ಸನ್ಮಾನ್ಯ ಕಾನೂನು ಮಂತ್ರಿಗಳು ನ್ಯಾಯಾಲಯಕ್ಕೆ ಹೇಳಬೇಕು. ಸ್ವಾಮಿ ದುಡಿಯುವ ಭೂಮಿಯೇ ಬೇರೆ. ಕಳ್ಳತನ ಮಾಡುವ ಭೂಮಿಯೇ ಬೇರೆ. ಇದರಲ್ಲಿ judge ಸೇರಿದ ಹಾಗೆ ನಾನು ಸೇರಿದ ಹಾಗೆ ಅನ್ನ ಉಣ್ಣುತ್ತಿದ್ದೇವೆ. ನ್ಯಾಯಾಧೀಶರು ಸೇರಿದಂತೆ ಎಲ್ಲರೂ ಅನ್ನ ಉಣ್ಣುತ್ತಿದ್ದಾರೆಂದು ಆ ಭೂಮಿಯ ಬಗ್ಗೆ ಹೇಳಬೇಕು. ಸ್ವಾಮಿ ನಮಗೆ ಮೋಸ ಮಾಡಿ ಕದ್ದಿರುವವರು ಅಲ್ಲಿದ್ದಾರೆ. ಆದ್ದರಿಂದ, ಅವರನ್ನು ಹಿಡಿದು ಹಾಕುವುದಕ್ಕೆ ದಯವಿಟ್ಟು ಭೂಮಿಯನ್ನು ಎರಡು ಭಾಗ ಮಾಡಿಕೊಳ್ಳಬೇಕೆಂದು ಅವರಲ್ಲಿ ವಿನಂತಿ ಮಾಡಿಕೊಂಡು ರೈತರನ್ನು ಕೈಬಿಡಿ. 10,20,000 ಎಕರೆ ಭೂಮಿಯಲ್ಲಿ ದುಡಿದು ಹಸಿರು ಬೆಳೆಸಿ ಅನ್ನ ಕೊಡತಕ್ಕಂಥವನ ಮೇಲೆ ನೀವು ಕಾನೂನು ಪ್ರಹಾರ ಮಾಡುತ್ತೇವೆಂದರೆ ಇದು ಯಾವ ನ್ಯಾಯ? ಇದರ ಬಗ್ಗೆ ದಯವಿಟ್ಟು ಗಂಭೀರವಾಗಿ ಆಲೋಚನೆ ಮಾಡಬೇಕು. ಒಂದು ಭೂಮಿಯನ್ನು ಲೆವೆಲ್ ಮಾಡಿ ಅದನ್ನು ಅಭಿವೃದ್ಧಿ ಮಾಡುವುದು ಸುಲಭದ ಮತ್ತು ಹುಡುಗಾಟದ ಕೆಲಸವಲ್ಲ. ಆದ್ದರಿಂದ, ತಾವು ದಯವಿಟ್ಟು ಇದರ ಬಗ್ಗೆ ಗಂಭೀರವಾಗಿ ಆಲೋಚನೆ ಮಾಡಿ. ಇವತ್ತು ಅಕ್ರಮ-ಸಕ್ರಮ ಎಂದು ಎಷ್ಟು ಜನರ ಮನೆ ಮತ್ತು ಸೈಟ್‌ಗಳನ್ನು ಅಕ್ರಮ-ಸಕ್ರಮ ಮಾಡಿದ್ದೀರಿ? ಇದನ್ನು ಅವರಿಗೆ ಏತಕ್ಕೆ ಮಾಡಿದ್ದೀರಿ? ಕಾನೂನು ಮಾಡಿ ಕೋಟ್ಯಾಂತರ ರೂಪಾಯಿ ಆಸ್ತಿಯನ್ನು ಅಕ್ರಮ-ಸಕ್ರಮ ಏಕೆ ಮಾಡಿದ್ದೀರಿ? ಭೂಮಿಯಲ್ಲಿ ದುಡಿದು ಅನ್ನ ಕೊಡುವ ರೈತನ ಭೂಮಿಯನ್ನು ಅಕ್ರಮದಿಂದ ಸಕ್ರಮ ಮಾಡುವುದಕ್ಕೆ ಏನು ತೊಂದರೆ? ರೈತರ ಭೂಮಿಯನ್ನು ಅಕ್ರಮ ಎಂದು ದಯವಿಟ್ಟು ಹೇಳಬಾರದು. ರೈತರನ್ನು ಭೂಗಳ್ಳರು, ಅಕ್ರಮದಾರರು ಎಂದು ಕರೆಯುವುದು ಪ್ರಜಾಪ್ರಭುತ್ವದಲ್ಲಿ ಬಹಳ ದೊಡ್ಡ ಅವಮಾನ. ಆದ್ದರಿಂದ

ಅವರನ್ನು ಭೂಗಳ್ಳರು, ಅಕ್ರಮರು ಎಂದು ಕರೆಯಬಾರದೆಂದು ಹೇಳುತ್ತಾ ಎರಡು ನಿಮಿಷ ಮಾತನಾಡುವುದಕ್ಕೆ ಅವಕಾಶ ಕೊಟ್ಟ ಮಾನ್ಯ ಉಪಾಧ್ಯಕ್ಷರಿಗೆ ಧನ್ಯವಾದಗಳು.

ಉಪಾಧ್ಯಕ್ಷರು:- ಒತ್ತುವರಿ ವಿಷಯಕ್ಕೆ ಸಂಬಂಧಪಟ್ಟ ಚರ್ಚೆ ಇಲ್ಲಿಗೆ ಮುಗಿಯಿತು.

ಶ್ರೀ ಹೆಚ್.ಕೆ. ಕುಮಾರಸ್ವಾಮಿ:- ಮಾನ್ಯ ಉಪಾಧ್ಯಕ್ಷರೆ, ಒತ್ತುವರಿ ವಿಷಯಕ್ಕೆ ಸಂಬಂಧಪಟ್ಟಂತೆ ನನಗೆ ತಾವು ಅವಕಾಶ ಕೊಡಬೇಕು.

ಉಪಾಧ್ಯಕ್ಷರು:- 5 ನಿಮಿಷದಲ್ಲಿ ಮಾತನಾಡಿ ಮುಗಿಸಬೇಕು.

ಶ್ರೀ ಹೆಚ್.ಕೆ. ಕುಮಾರಸ್ವಾಮಿ (ಸಕಲೇಶಪುರ):- ಮಾನ್ಯ ಉಪಾಧ್ಯಕ್ಷರೆ, ಭೂಸ್ವಾಧೀನವನ್ನು ಭೂ ಒತ್ತುವರಿ ಎಂದು ನಾನು ಕರೆಯುವುದಿಲ್ಲ. ನಮ್ಮ ಹಿರಿಯರೆಲ್ಲರು ಅಭಿಪ್ರಾಯ ಪಟ್ಟಂತೆ ಭೂಸ್ವಾಧೀನಕ್ಕೆ ಸಂಬಂಧಪಟ್ಟಂತೆ ಸಾಕಷ್ಟು ಚರ್ಚೆಗಳು ಸದನದಲ್ಲಿ ನಡದಿವೆ. ಹೊರಗಡೆ ರೈತರು ಮತ್ತು ಇತರೇ ಸಂಘಟನೆಗಳು ಹಾಗೂ ನಮ್ಮನ್ನೂ ಸೇರಿಕೊಂಡಂತೆ ಸಾಕಷ್ಟು ಪ್ರತಿಭಟನೆಗಳನ್ನು ನಾವು ಮಾಡಿದ್ದೇವೆ. ಈ ಸಂದರ್ಭದಲ್ಲಿ ಒಂದೇ ಒಂದು ಮಾತನ್ನು ಸರ್ಕಾರಕ್ಕೆ ಹೇಳುವುದಕ್ಕೆ ಬಯಸುತ್ತೇನೆ. ಈಗಾಗಲೇ ಕಾನೂನನ್ನು ಕೈಗೆತ್ತಿಕೊಳ್ಳತಕ್ಕಂಥ ಸಂದರ್ಭಗಳು ಬಂದು ಹೋಗಿವೆ. ರೈತರು ತಾಳ್ಮೆಗೆಟ್ಟಿದ್ದಾರೆ. ಯಾವಾಗ ಏನಾಗುತ್ತದೆಂದು ಯಾರಿಗೂ ಸಹ ಹೇಳುವುದಕ್ಕೆ ಬರುವುದಿಲ್ಲ. ಅದನ್ನು ತಪ್ಪಿಸತಕ್ಕಂಥ ಶಕ್ತಿ ಸರ್ಕಾರಕ್ಕೆ ಇದೆ. ಈಗಾಗಲೇ ಮಾನ್ಯ ಬೋಪಯ್ಯನವರು ಮತ್ತು ಮಾನ್ಯ ಪುಟ್ಟಣ್ಣಯ್ಯನವರು ಸಹ ಹೇಳಿದ್ದಾರೆ. ನಮ್ಮ ಮಲೆನಾಡು ಭಾಗದ ಜಮೀನಿನ ಒತ್ತುವರಿಗೂ ಮತ್ತು ಮೈದಾನ ಪ್ರದೇಶಕ್ಕೂ ವ್ಯತ್ಯಾಸ ಇದೆ. ಮೈದಾನ ಭಾಗದಲ್ಲಿ ವರ್ಷದಲ್ಲಿ ನಾಲ್ಕು-ಐದು ತಿಂಗಳು ಮಾತ್ರ ಸ್ವಾಧೀನದಲ್ಲಿರುತ್ತಾರೆ. ಅವರು ಖುಷ್ಕಿ ಮತ್ತು ತರಿ ಬೆಳೆಯನ್ನು ಯಾವಾಗ ಬೇಕಾದರು ಬೆಳೆಯಬಹುದು. ಆದರೆ, ಮಲೆನಾಡು ಭಾಗದ ಸುಮಾರು 11 ಜಿಲ್ಲೆಗಳಲ್ಲಿ perennial crops ಬೆಳೆಯುತ್ತಾರೆ. ಅಂದರೆ, ಕಾಫಿ, ಏಲಕ್ಕಿ, ಮೆಣಸು, ಅಡಿಕೆ ಅಥವಾ ಬೇರೆ

ಬೇರೆ ತೋಟಗಾರಿಕೆ ಬೆಳೆಗಳಿರಬಹುದು, ಅವು perennial crops, ಇದನ್ನು ನಾವು ತೆಗೆಯುವುದಕ್ಕೆ ಬರುವುದಿಲ್ಲ. Perennial crops ಅನ್ನು ತೆಗೆಯಲು ಜೆಸಿಬಿ ತಂದು ಮಾಡುವುದಕ್ಕೆ ಬಂದರೆ ಅವರೆಲ್ಲರಿಗೂ ಸಹ ನಿದ್ದೆಗೆಡಿಸುವದಲ್ಲದೆ ಅವರುಗಳು ನಮಗೆ ಮಧ್ಯರಾತ್ರಿಯಲ್ಲಿ ಫೋನ್ ಮಾಡುತ್ತಾರೆ. ಅಧಿಕಾರಿಗಳು ಬಾರಿ ಬುದ್ಧಿವಂತರಿದ್ದಾರೆ. ನ್ಯಾಯಾಲಯದ ಆದೇಶವನ್ನು ಹಾಕಿ ಎಲ್ಲರಿಗೂ ನೋಟೀಸ್ ಕೊಟ್ಟಿದ್ದಾರೆ. ಇವತ್ತಿನ ದಿವಸ ಒಂದು slab ಮಾಡಿ. ಅಂದರೆ, ಸಣ್ಣ ಹಿಡುವಳಿದಾರರೆಂದು 4 ಎಕರೆ 30 ಗುಂಟೆ ಒಳಗಡೆ ಇದ್ದವರದ್ದು ಒಂದು, ಮತ್ತು ಅದಕ್ಕಿಂತ ಮೇಲ್ಗಡೆ ಇರತಕ್ಕಂಥವರದ್ದು ಒಂದು, ಈ ರೀತಿಯಾಗಿ ಸರ್ಕಾರ ವಿಂಗಡನೆ ಮಾಡಲಿ. 11 ಲಕ್ಷ ಒತ್ತುವರಿ ಆಗಿದೆ ಎಂದು ನಮ್ಮ ಹತ್ತಿರ ದಾಖಲೆ ಇದೆ. ಅದರಲ್ಲಿ 3 ಲಕ್ಷ ಎಕರೆಯಷ್ಟು ಸಣ್ಣ ಹಿಡುವಳಿದಾರರೂ ಇದ್ದಾರೆಂದು ಅಂಕಿ–ಅಂಶಗಳಲ್ಲಿದೆ. ಅದಕ್ಕಾದರೂ ರಕ್ಷಣೆ ಕೊಡುವುದಕ್ಕೆ ತಾವು ಆದೇಶ ಹೊರಡಿಸಿ. ಇಲ್ಲಿ ಶಾಸಕಾಂಗ ಏತಕ್ಕೆ ಇರುವುದು? ಇಲ್ಲಿ ನಮ್ಮ ಕರ್ತವ್ಯ ಏನು? ಮಾನ್ಯ ಸ್ಪೀಕರ್ ಸಾಹೇಬರು ಅನೇಕ ಸಾರಿ ಈ ಬಗ್ಗೆ ಹೇಳಿದ್ದಾರೆ. 192 (ಎ) ಅನ್ನು delete ಮಾಡೋಣ. ಇದನ್ನು ಗ್ರಾಮೀಣ ಪ್ರದೇಶಕ್ಕೂ extend ಮಾಡಿದ್ದಾರೆ. ಆದ್ದರಿಂದ, ಗ್ರಾಮೀಣ ಪ್ರದೇಶದಲ್ಲಿರುವ ಭೂಮಿಯನ್ನು ಅದರಿಂದ ತೆಗೆಯೋಣ. ಏಕೆ ನಮಗೆ powers ಇಲ್ಲವೇ? ಅದನ್ನು ನಾವು ಮಾಡಿ ಕಳುಹಿಸಿಕೊಟ್ಟು ಅದಕ್ಕೆ ಒಪ್ಪಿಗೆ ಪಡೆಯೋಣ. ಹಾಗಾದರೆ, ನಾವು ಇರುವುದಾದರು ಏಕೆ? ಇದರ ಬಗ್ಗೆ ನಮ್ಮ ಅನೇಕ ಸ್ನೇಹಿತರೆಲ್ಲಾ ಸಾಕಷ್ಟು ಸಾರಿ ಹೇಳುತ್ತಿದ್ದೇವೆ. ಆದರೆ, ಇದನ್ನು ಸರ್ಕಾರ ಕಿವಿಗೆ ಹಾಕಿಕೊಳ್ಳುತ್ತಿಲ್ಲ. ಆದ್ದರಿಂದ, ಇದು ಏನೆಂಬುದು ನಮಗೆ ಅರ್ಥವಾಗಿಲ್ಲ.

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ಮತ್ತು ಪಶುಸಂಗೋಪನೆ ಇಲಾಖೆ ಸಚಿವರು):– ಮಾನ್ಯ ಕುಮಾರಸ್ವಾಮಿಯವರೇ, ಇದೆಲ್ಲ ಯಾವ ಹಿನ್ನೆಲೆಯಲ್ಲಿ develop ಆಗಿದೆ ಎಂಬ ವಿಚಾರವನ್ನು ಹೇಳಿದ್ದೀರಿ. ಈ ವಿಷಯಕ್ಕೆ ಸಂಬಂಧಪಟ್ಟಂತೆ ತಾವು ಸಲಹೆ

ಕೊಡುತ್ತೀದ್ದೀರಿ. ಇದಕ್ಕೆ ಉತ್ತರ ಕೊಡುವಂಥ ಸಂದರ್ಭದಲ್ಲಿ ಹೇಳುತ್ತೇವೆ. 2007 ರಲ್ಲಿ ತಂದಂಥ ಅಮೆಂಡ್‌ಮೆಂಟ್‌ನಲ್ಲಿ 192 (ಎ) ಎನ್ನತಕ್ಕಂಥದನ್ನು ತಂದ ಪರಿಣಾಮದಿಂದ ಇದೆಲ್ಲವೂ ಆಗಿದೆ. 2007 ರಲ್ಲಿ Land Grabbin Act ಅನ್ನು ತಂದಿದ್ದು ಅದು ಬದಲಾವಣೆ ಆಗಿ 2011 ಕ್ಕೆ ಹೋಯಿತು. ಅದು ಅಂತಿಮವಾಗಿ ರಾಷ್ಟ್ರಪತಿಯವರಿಂದ ಅಂಕಿತವಾಗಿ ಬರಬೇಕಾದರೆ 2014 ಆಯಿತು. ಈ ಮೂರಕ್ಕೂ ಏನು ವ್ಯತ್ಯಾಸ ಇದೆ ಎಂಬುದನ್ನು ಕಂಡುಹಿಡಿಯುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಇದಕ್ಕೆಲ್ಲ ಒಂದು ಮೂಲ ಏನೆಂದರೆ, forest land ನಲ್ಲಿ ಇದೆಲ್ಲ ಏಕೆ ಇಷ್ಟೊಂದು hard ಆಯಿತೆಂದು ಮತ್ತು ಈ ಬಗ್ಗೆ ಕಾನೂನು ಮಾಡುವುದಕ್ಕೆ ಅಧಿಕಾರಿಗಳಿಗೆ ಏಕೆ ಧೈರ್ಯ ಬಂತು ಎಂಬುದಕ್ಕೆ ಒಂದು ಉದಾಹರಣೆ ಕೊಡುತ್ತೇನೆ. Jagpal Singh v/s. State of Punjab ಕೇಸ್‌ನಲ್ಲಿ ಸುಪ್ರೀಂ ಕೋರ್ಟ್‌ನ ಡೈರೆಕ್ಷನ್ ಓದುತ್ತೇನೆ.

"We give directions to all the State Governments in the country that they should prepare schemes for eviction of illegal / unauthorized occupants of Gram Sabha/Gram Panchayat/Poramboke/ Shamlat land and these must be restored to the Gram Sabha/Gram Panchayat for the common use of villagers of the village. For this purpose the Chief Seretarie of all State Governments/Union Territories in India are directed to do the needful, taking the help of other senior officers of the Governments. The said scheme should provide for the speedy eviction of such illegal occupan, after giving him a show cause notice and a brief hearing. Long duration of such illegal occupation or huge expenditure in making construction thereon or political connections must not be treated as a justification for condoning this illegal act or for regularizing the illegal possession. Regularization should only be permitted in exceptional cases e.g. where lease has been granted under some Government

notification to landless labourers or members of scheduled Castes/Scheduled Tribe, or where there is already a school, dispensary or other public utility on the land." ಸುಪ್ರೀಂ ಕೋರ್ಟ್‌ನಿಂದ ಈ directions ಬಂದ ಮೇಲೆ . . .

SRI K.R. RAMESH KUMAR:- Alright Hon'ble Law Minister, the very order your read,.. if the land is encroached upon by he people illegally, ಅದನ್ನು ಗ್ರಾಮಪಂಚಾಯಿತಿಗೆ handover ಮಾಡುತ್ತೀರಾ? ಅವರಿಗೆ concept of land ಬಗ್ಗೆ ಅರಿವಿದೆಯೇ? Cultivable land ಇದ್ದರೆ ಅದನ್ನು ಗ್ರಾಮಪಂಚಾಯತ್ಗೆ ಕೊಡುತೀರಾ? ಗ್ರಾಮದ ಒಳಗೆ ಅಂದರೆ ಗ್ರಾಮಠಾಣಾದಲ್ಲಿದ್ದರೆ ಕೊಡಬಹುದು. As Mr. Puttannaiah said, they have no idea of what the land is. Cultivable land ಅನ್ನು ಗ್ರಾಮ ಪಂಚಾಯತ್‌ಗೆ ಕೊಡುವುದಂತೆ,.. Further ಏನು ಹೇಳುತ್ತಾರೆಂದರೆ, political connection ಇದ್ದರೆ ಏನು ಮಾಡಬೇಕೆಂಬುದರ ಬಗ್ಗೆ ಹೇಳಿರುವುದೆಲ್ಲ prejudice. ಎಲ್ಲಾ ರಾಜಕಾರಣಿಗಳು ಅಂದರೆ, ಈ ದೇಶದಲ್ಲಿ ಎಷ್ಟು ಜನ ಸಾರ್ವಜನಿಕ ಬದುಕಿನಲ್ಲಿದ್ದಾರೆಯೋ ಅವರೆಲ್ಲರೂ ಕಳ್ಳರು, ಈ 135 ಜನರು ಮಾತ್ರ honest people. The whole order,.... Why did not the Government of the day prefer an appeal against the state? Does that order make sense?

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ಮತ್ತು ಪಶುಸಂಗೋಪನೆ ಇಲಾಖೆ ಸಚಿವರು):- ಮಾನ್ಯ ರಮೇಶ್ ಕುಮಾರ್‌ರವರೇ, ಇದು ಅಷ್ಟಕ್ಕೇ ನಿಲ್ಲಲಿಲ್ಲ. "Let a copy of this order be sent to all Chief Secretaries of all States and Union Territories in India who will ensure strict and prompt compliance of this order and submit compliance reports to this Court from time to time."

ಶ್ರೀ ಕೆ.ಆರ್. ರಮೇಶ್ ಕುಮಾರ್:- ಸ್ವಾಮಿ ಮಹಾನುಭಾವರೆ, ನಾನು ಹೇಳುವುದನ್ನು ದಯವಿಟ್ಟು ಕೇಳಿ. ತಾವು ಮತ್ತು ಮಾನ್ಯ ಕಂದಾಯ

ಸಚಿವರು ಸಹ ಇಲ್ಲಿಯೇ ಇದ್ದಾರೆ. Alright you are going to implement this order, ನೀವು illegal ಆಗಿ encroach ಮಾಡಿರುವ ಜಾಗದಲ್ಲಿ cultivate ಮಾಡಿರುವಂಥ ಜಾಗವನ್ನು ಗ್ರಾಮ ಪಂಚಾಯತ್‌ಗೆ handover ಮಾಡುತ್ತೀರಾ? ಇದು ಸಾಧ್ಯವೇ? ಆ order ಗೆ ಏನಾದರು ಅರ್ಥ ಇದೆಯೇ? ತಲೆ, ಬಾಲ ಏನಾದರು ಇದೆಯೇ? ಸ್ವಾಮಿ, ಮಹಾನುಭಾವರೆ ತಾವು ಮೇಲೆ ಕುಳಿತುಕೊಂಡಿದ್ದೀರಿ, ನಿಮಗೆ ಭೂಮಿಯ ಕಲ್ಪನೆಯೇ ಇಲ್ಲ, ಈ ಜಮೀನನ್ನು ಪಂಚಾಯತ್‌ಗೆ ಕೊಡುವುದಕ್ಕೆ ಆಗುವುದಕ್ಕೆ ಬರುವುದಿಲ್ಲವೆಂದು, ನಿಮ್ಮ ವಕೀಲರಿಗೆ ಹೇಳುವುದಕ್ಕೆ ಬರಲಿಲ್ಲವೇ? ಅಥವಾ this order is factually incorrect, it is unenforceable ಎಂದು ಹೇಳುವುದಕ್ಕೆ ನಿಮ್ಮವರಿಗೆ ಆಗಲಿಲ್ಲವೇ? Alright, we will all bow down to this order. ನೀವು implement ಮಾಡಿ ನೋಡೋಣ. How can this happen?

ಶ್ರೀ ಕೆ.ಜಿ. ಬೋಪಯ್ಯ:- ಮಾನ್ಯ ಉಪಾಧ್ಯಕ್ಷರೆ, ಈ concept ಬೇರೆ. ಸುಪ್ರೀಂ ಕೋರ್ಟ್‌ನಲ್ಲಿ ಏನಾಗಿದೆ ಎಂದರೆ, ಬೆಂಗಳೂರು ಸಿಟಿಯಲ್ಲಿರುವ ಕೆರೆಗಳನ್ನು ಒತ್ತುವರಿ ಮಾಡಿಕೊಂಡು constructions ಮಾಡಿಕೊಂಡು ಹೋದರೆ ನಾಳೆದಿವಸ ಅವರಿಗೇ burden ಆಗುತ್ತದೆ. ಆದ್ದರಿಂದ, ಈ ರೀತಿಯಾಗಿ unauthorized constructions ಏನೇನು ಆಗುತ್ತಿದೆ it must be stopped, there must be a law ಎಂದು ಜಗಪಾಲ್ ಸಿಂಗ್ ಕೇಸ್‌ನಲ್ಲಿ ಹೇಳಿದ್ದಾರೆ. ಅದನ್ನು ಇವತ್ತು ದುರುಪಯೋಗ ಮಾಡಿ ರೈತ cultivation ಮಾಡಿರುವ ಜಾಗಕ್ಕೆ apply ಮಾಡುತ್ತೇನೆಂದರೆ ಹೇಗೆ? ಅದರ preamble ನಲ್ಲಿ ಅದೇ ವಿಷಯ ಕ್ಲಿಯರ್ ಆಗಿದೆ. ತಾವು ಸಹ ಇಲ್ಲಿ ಕುಳಿತುಕೊಂಡು ಅದು ಬೇಕೆಂದು ಹೇಳಿದ್ದೀರಿ. ಆದರೆ, Act ಅಗುವಾಗ ತಪ್ಪಾಗಿ ಆಗಿದೆ. ಆದ್ದರಿಂದ, ಅದನ್ನು ಸರಿ ಮಾಡುವಂಥ ಕೆಲಸವನ್ನು ಮಾಡೋಣ. ಹಿಂದಿನ ಸರ್ಕಾರ ಮಾಡಿದ್ದೆಲ್ಲ ಸರಿ ಎಂದು ನಾನೇನು ಹೇಳುವುದಿಲ್ಲ. ಎಲ್ಲಿ ತಪ್ಪಾಗಿದೆ ಅದನ್ನು ಸರಿ ಮಾಡೋಣ. ಈಗ ದಯವಿಟ್ಟು ಹೇಳುವುದೇನೆಂದರೆ, ಅಲ್ಲಿಯವರೆಗೆ 5 ಎಕರೆ ಕೆಳಗ ಇರುವವರನ್ನು ಮುಟ್ಟಬೇಡಿ. ನಮ್ಮ

ಜಿಲ್ಲೆಯಲ್ಲಿ 10, 20 ಸೆಂಟ್ ಜಾಗಕ್ಕೂ ಸಹ ನೋಟೀಸ್ ಕೊಟ್ಟಿದ್ದಾರೆ. ನೋಟೀಸ್ ಕೊಟ್ಟಿರುವುದನ್ನು ನಾಳೆ ದಿವಸ ಇಲ್ಲಿ ತಂದು produce ಮಾಡುತ್ತೇವೆ. ಮಾಡಬಾರದೆಂದು ಏನಾದರೂ ಪ್ರತಿ ಏನಾದರು ಇದ್ದರೆ ನಮಗೆ ಕೊಡಿ. ಕಸ್ತೂರಿ ರಂಗನ್‌ರವರ ವರದಿ ಇನ್ನೂ ಏನು ಆಗದೆ ಇದ್ದರೂ ಅಧಿಕಾರಿಗಳು ಈಗಲೇ ಯುನೆಸ್ಕೋಗೆ ಹೋಗಿ ತಲುಪಿದ್ದಾರೆ.

ಉಪಾಧ್ಯಕ್ಷರು:– ಕುಮಾರಸ್ವಾಮಿಯವರೆ, ನೀವು conclude ಮಾಡಿ.

ಶ್ರೀ ಎಚ್.ಕೆ. ಕುಮಾರಸ್ವಾಮಿ:– ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಕಂದಾಯ ಸಚಿವರು ಕಾರ್ಯಾಂಗದ ಮುಖ್ಯಸ್ಥರಾಗಿ ಅವರ ಕರ್ತವ್ಯವನ್ನು ನಿಭಾಯಿಸಿದ್ದಾರೆ. ಅಂದರೆ, ತಾವು ಹೇಳಲೇಬೇಕು ಆದ್ದರಿಂದ, ಹೇಳುತ್ತಿದ್ದೀರಿ. ಆದರೆ, ಹಳ್ಳಿಗಳಲ್ಲಿ ವಾಸ್ತವಿಕತೆ ಏನೆಂಬುದರ ಬಗ್ಗೆ ಮಾನ್ಯ ರಮೇಶ್ ಕುಮಾರ್‌ರವರು ಬಹಳ ಚೆನ್ನಾಗಿ explain ಮಾಡಿದ್ದಾರೆ. ಈ ಬಗ್ಗೆ ಎಲ್ಲರೂ ಹೇಳಿದ್ದೇವೆ. ನಾನೊಬ್ಬನೆ ಹೇಳಿಲ್ಲ. ಈ ಬಗ್ಗೆ ತಾವು ದಯವಿಟ್ಟು ಅರ್ಥ ಮಾಡಿಕೊಳ್ಳಿ. Revision petition ಹಾಕಬಾರದೆಂದು ಎಲ್ಲಿದೆ? ಸರ್ಕಾರ ಏತಕ್ಕೆ ಹಾಕಿಲ್ಲ? ಇಲ್ಲಿರುವ 225 ಜನ ಶಾಸಕರು ಒಕ್ಕೊರಲಿನಿಂದ ಹೇಳುತ್ತಿದ್ದೇವೆ. ಇದಕ್ಕಿಂತ ಏನು ಬೇಕು? ಇವೆಲ್ಲವನ್ನು ತಾವೇಕೆ ನ್ಯಾಯಾಲಯಕ್ಕ ತಿಳಿಸುತ್ತಿಲ್ಲ? ಇಲ್ಲಿ ನಾವು ಹೇಳುತ್ತಲೇ ಇದ್ದೇವೆ ಅದನ್ನು ನೀವು ಕೇಳುತ್ತಲೇ ಇದ್ದೀರಿ. ಇದು ಕೇವಲ ಚರ್ಚೆಯಾಗಿ ಮುಂದಕ್ಕೆ ಹೋಗುತ್ತಿದೆ. ನನ್ನ ಕ್ಷೇತ್ರದಲ್ಲಿ ಜೀತದಾಳುಗಳು ಇನ್ನೂ ಸಹ ಇದ್ದಾರೆ. ಈಗ 416 ಜನ ಜೀತದಾಳುಗಳನ್ನು ಗುರುತು ಮಾಡಿದ್ದೇವೆ. ಬೇರೆ ತಾಲ್ಲೂಕಿನವರನ್ನು ತಂದು ಅಲ್ಲಿ ಲ್ಯಾಂಡ್ ಕೊಡುತ್ತಿದ್ದಾರೆ, ಅಲ್ಲಿಯವರಿಗೇ ಕೊಡುತ್ತಿಲ್ಲ, ದುರಂತ ನೋಡಿ ಹೇಗಿದೆ ಎಂದು. ಹೇಳಿ? ಅಂಥವರಿಗೆ ಮಾಡಿ. ಈ ಲ್ಯಾಂಡ್ ಅನ್ನು ಇಟ್ಟುಕೊಂಡು ಅಂಥವರಿಗೆ ಹಂಚಿ, ಆ ತರಹದವರಿಗೆ ನೀವು ಹಂಚಿಕೆ ಮಾಡಿ. ಸಣ್ಣ ಹಿಡುವಳಿದಾರರಿಗಾದರೂ ಕನಿಷ್ಟ protection ಇರಬಾರದೇ? ಆದ್ದರಿಂದ ದಯಮಾಡಿ ಇದನ್ನು ಸರ್ಕಾರ ತೀವ್ರತರವಾಗಿ ತುಂಬಾ ಆದ್ಯತೆ ಮೇಲೆ ತೆಗೆದುಕೊಂಡು ಈ ಸಮಸ್ಯೆಯನ್ನು ಬಗೆಹರಿಸಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಕೆ. ಶಿವಮೂರ್ತಿ (ಮಾಯಕೊಂಡ):- ಮಾನ್ಯ ಉಪಾಧ್ಯಕ್ಷರೆ, ಈ ಭೂಮಿ ಬಗ್ಗೆ ನ್ಯಾಯಾಲಯದ ತೀರ್ಪುಗಳು ಮತ್ತು ಶಾಸಕಾಂಗದಲ್ಲಿ ಆಗತಕ್ಕಂಥ ಚರ್ಚೆಗಳು ಇವೆಲ್ಲವು ಪರಿಪೂರ್ಣವಾಗಿರತಕ್ಕಂಥ ಚರ್ಚೆಗಳು ಆಗಲಿಲ್ಲ, ಪರಿಪೂರ್ಣವಾಗಿ judgment ಸಹ ಆಗಲಿಲ್ಲ. ಇದು ಅಪೂರ್ಣವಾಗಿರತಕ್ಕಂಥದ್ದು. These discussions are half hearted. ಈ ಚರ್ಚೆ, ಈ ಶಾಸನ ತಂದಿರತಕ್ಕಂಥದ್ದು ಎಷ್ಟು ದೊಡ್ಡದು ಇದೆ ಎಂದು ಹೇಳಿದರೆ ಇದು ಪವಿತ್ರಗ್ರಂಥ ಇದ್ದಂತೆ ಇದೆ. ಇದನ್ನು ಯಾವರೀತಿಯಲ್ಲಾದರೂ ಬಳಸಿಕೊಳ್ಳಬಹುದು. ಯಾವ ರೀತಿಯಲ್ಲಾದರೂ interpretation ಮಾಡಬಹುದು. ಇದು ಬಡವರಿಗೇ ಒಂದು ತರಹ interpretation ಆದರೆ, ಸಾಹುಕಾರರಿಗೇ ಒಂದು ತರಹ interpretation ಇದೆ. ಎಂತೆಂಥ ಜಮೀನುಗಳು, Forest Act ಬಂದ ಮೇಲೆ ಮೂಖ ಪ್ರಾಣಿಗಳು, ಅಲ್ಲಿ ಸಾಗುವಳಿ ಮಾಡತಕ್ಕಂಥವರು, ಅಲ್ಲಿರತಕ್ಕಂಥ ಜನರನ್ನು ಒಕ್ಕಲೆಬ್ಬಿಸಿದರು. ಅವರಿಗೆ ಯಾರಾದರೂ ಕೇಳಿದರಾ? Before passing an enactment or Act, whether they have heard? Because, they are illiterates. They could not write, they could not convey. Mediators like us ಇದನ್ನು interpretation ಮಾಡುತ್ತಿದ್ದೇವೆ. Including the bureaucracy, the judges and the legislators, ಇದು half heartedly ಆದರೆ ಇದಕ್ಕೆ ಒಂದು concrete ಆಗಿ solution ಸಿಗುವುದಿಲ್ಲವೆಂದು ಹೇಳತಕ್ಕಂಥದ್ದು. ಇತ್ತೀಚಿನ ದಿವಸಗಳಲ್ಲಿ ಸರ್ಕಾರ Forest Dwellers Act ಮಾಡಿದೆ. Forest ನಲ್ಲಿ ಯಾರು ಇರುತ್ತಾರೆ ಅವರಿಗೆ ಹಕ್ಕುದಾರಿಕೆ ಕೊಡಿಸತಕ್ಕಂಥದ್ದು. ಈಗ ನಮಗೆಲ್ಲಾ notice ಕೊಟ್ಟು ಬಿಟ್ಟಿದ್ದಾರೆ. ಅಲ್ಲಿ ಅಮಾಯಕರು ಏನು ಹೇಳುತ್ತಾರೆ. ಕೂಲಿ ಮಾಡತಕ್ಕಂಥ ಜನ ಪ್ರತಿ ದಿವಸ ಬಂದು ನಮಗೆ notice ಕೊಟ್ಟಿದ್ದಾರೆ, ನಾವು ಸಹಿ ಹಾಕಬೇಕೋ ಬೇಡವೋ ನಮಗೆ ಬಿಡಿಸುತ್ತಾರೋ ಇಲ್ಲವೋ, ನಾವು ಇದರ ಮೇಲೆ ಜೀವನಾವಲಂಬಿತರಾಗಿದ್ದೇವೆ, ನಮಗೆ ಇದರಿಂದ ಆದಾಯವೇ ಇಲ್ಲ, ನಾವು ಅರ್ಧ ಎಕರೆಯಷ್ಟು ಮಾಡಿದ್ದೇವೆಂದು ಹೇಳುತ್ತಾರೆ. ಅವರಿಗೆ ಹಕ್ಕುದಾರಿಕೆ ಕೊಡುವುದರ ಜೊತೆಗೆ, ತಾವು ಇನ್ನೂ ಒಂದು ಹೇಳಬೇಕೆಂದರೆ, ಸ್ಮಶಾನಕ್ಕೆ

ಒಂದು ಸೈಟಿನಷ್ಟು ಜಾಗವೂ ಇಲ್ಲ. ನಮ್ಮ ಪರಿಸ್ಥಿತಿ ಹೇಳಿದರೆ, ಈ ಕಾನೂನುಗಳು ಎಷ್ಟು fragment ಆಗಿ ಇರಬೇಕೆಂದು ಹೇಳಿದರೆ ನಾವು ಸತ್ತರೆ ನಮ್ಮ ಶವಸಂಸ್ಕಾರ ಮಾಡಬೇಕಾದರೆ ನಮಗೆ ಈ ದೇಶದಲ್ಲಿ ಜಮೀನು ಇಲ್ಲ. ಇದಕ್ಕೋಸ್ಕರ ನಾವು ಭಿಕ್ಷೆ ಬೇಡಬೇಕು. ಅವರಿಗೆ ಅರ್ಜಿ ಬರೆಯುವುದಕ್ಕೂ ಶಕ್ತಿ ಇಲ, ಅವರಿಗೆ ಆ ವಿದ್ಯಾವಂತಿಕೆ ಇಲ್ಲ, ಆ ಶ್ರೀಮಂತಿಕೆ ಇಲ್ಲ. ಇದರ ಮಧ್ಯೆ ಯಾರೋ ಏಜೆಂಟರು ಹುಟ್ಟಿಕೊಂಡು ಬಿಟ್ಟಿದ್ದಾರೆ. ದಯವಿಟ್ಟು ನಾನು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ತಾವು ಕೊಟ್ಟಿರತಕ್ಕಂಥ ಅರ್ಜಿಗಳು ಇವೆ, ತಾವು ಈಗ notice ಕೊಟ್ಟಿದ್ದೀರಿ ಅವುಗಳನ್ನು ವಿತ್‌ಡ್ರಾ ಮಾಡಬೇಕು, ಅವರಿಗೆ ಜಮೀನು ಕೊಡಬೇಕು. ಏಕೆಂದರೆ, Social Welfare Department, at the cost of social welfare money ಅವರಿಗೆ ತಿಳುವಳಿಕೆ ಮತ್ತು ಪರಿಜ್ಞಾನ ಮತ್ತು legal aid ಕೊಡತಕ್ಕಂಥದ್ದು. ಹಿಂದೆ ನಮಗೆ Land Reforms Act ಬಂದಾಗ Fragmentation Act ಬಂದಾಗ ಚೋಮನದುಡಿ ಎನ್ನತಕ್ಕಂಥ ಸಿನೆಮಾ ಬಂತು. ಅದರ correspondence, ಕತೆ ಎಲ್ಲಾ ಬರೆದಿರತಕ್ಕಂಥವರು ಬ್ರಾಹ್ಮಣರು, Act ಮಾಡಿರತಕ್ಕಂಥವರು ದಲಿತರು, ಆ ಸಿನೇಮಾ ಬಂದ ಸಮಯದಲ್ಲಿ ದಿ:ದೇವರಾಜ್ ಅರಸುರವರು ಊಳುವವನೇ ಭೂಮಿಯ ಒಡೆಯ ಎನ್ನತಕ್ಕಂಥ ಮಾತನ್ನು ಹೇಳಿದರು. ಯಾರು ಮನೆಯಲ್ಲಿ ಇರುತ್ತಾರೆ ಅವರದ್ದೇ ಮನೆ. ಯಾರು ಭೂಮಿ ಊಳುಮೆ ಮಾಡುತ್ತಾನೋ ಅವನದೇ ಜಮೀನು ಎನ್ನತಕ್ಕಂಥ ಒಂದು ದೊಡ್ಡ slogan ಕೊಟ್ಟಾಗ ಒಂದು ಪರಿವರ್ತನೆ ಆಯಿತು, ಜನಜಾಗೃತಿ ಆಯಿತು. ಆದರೂ ಸಹ ಸರಿಯಾದ ರೀತಿಯಲ್ಲಿ implement ಆಗಲಿಲ್ಲ ಎನ್ನತಕ್ಕಂಥ ಚುಕ್ಕೆ ಹಾಗೆ ಇದೆ. ಅದಕ್ಕೋಸ್ಕರ ನಾನು ಈ existing Land Revenue Act ಕೆಳಗಡೆ ಕೇಳಿಕೊಳ್ಳುತ್ತೇನೆ. Forest land, Excise land, Revenue land and Private land, ಈ 4 ತರಹ land ನಲ್ಲಿ ಸೈಟ್‌ಗೆ ownership ಕೊಟ್ಟಿಲ್ಲ. They have not recognized, they have not extended the legal entity, they have not identified us that we are in that particular piece of a site, not only land. Cultivation ಹೋಗಲಿ, ಸೈಟ್‌ನಲ್ಲಿ ಇದ್ದೆವೆಂದು ಹೇಳತಕ್ಕಂಥದ್ದು.

ದಯವಿಟ್ಟು ಅದರ ಬಗ್ಗೆಯೂ ಸಹ ನಮ್ಮ ಸರ್ಕಾರ ಕಾನೂನುಗಳ ಬಗ್ಗೆ ಯೋಚನೆ ಮಾಡಬೇಕು. ತಾವು ನೋಟೀಸ್ ಕೊಡುವುದರ ಮೂಲಕ ಆ ಜನಗಳಿಗೆ, ಅಮಾಯಕರಿಗೆ ಹೆದರಿಕೆಯನ್ನು ಹುಟ್ಟಿಸಿದ್ದೀರಿ. ಹಾಗಾಗಿ, ಆ ನೋಟೀಸ್ ಅನ್ನು ವಾಪಸ್ಸು ಪಡೆಯಬೇಕು ಎನತಕ್ಕಂಥದ್ದು. ಹಿಂದಿನ ದಿವಸಗಳಲ್ಲಿ ಇತ್ತೀಚಿನ ಸರ್ಕಾರ ನಾವು Forest Rights Act ಮಾಡಿದ ಮೇಲೆ rules frame ಮಾಡುವುದರಲ್ಲಿ ಸ್ವಲ್ಪ ಡಿಲೇ ಮಾಡಿದ್ದೇವೆ. I don't know what is the idea, logic and hidden agenda. Because, some people are very concerned, some people are very sympathetic, some peope are interpretative, some people are very action oriented, some people are committed. ಅದಕ್ಕೋಸ್ಕರ ನಾನು ಹಿಂದೆ ಇದ್ದಂಥ ದಿ:ದೇವರಾಜ್ ಅರಸುರವರು, ಬಸವಲಿಂಗಪ್ಪನವರು, ಮಹಾನ್ ನಾಯಕರು ಇದರ ಬಗ್ಗೆ ಯೋಚನೆ ಮಾಡಿದ್ದರು. ಕೇಂದ್ರ ಸರ್ಕಾರವು ಸಹ 20 ಅಂಶಗಳ ಕಾರ್ಯಕ್ರಮದಲ್ಲಿ ಭೂಮಿಯ ಬಗ್ಗೆ ಭೂದಾನ, ಗೋದಾನ ಎನ್ನತಕ್ಕಂಥಹ ದೊಡ್ಡ ದೊಡ್ಡ ಚಳುವಳಿಗಳು ಸಹ ನಡೆದಿವೆ. ಅದಕ್ಕೋಸ್ಕರ ಇಲ್ಲಿ ಕಾನೂನೂ ಸಚಿವರು ಇದ್ದಾರೆ, ಮುಖ್ಯವಾಗಿ ಕಂದಾಯ ಸಚಿವರು ಇದ್ದಾರೆ. Bth are very very committed, very fragmented. ಮುಖ್ಯವಾಗಿ ಅಧ್ಯಕ್ಷರು ಈ ಚರ್ಚೆ ಮಾಡಲಿಕ್ಕೆ ಬಿಟ್ಟಾಗ ಇವೆಲ್ಲಾ ಹೊರಗೆ ಬರುತ್ತದೆ. That is the greatness and beauty of the speaker, beauty of the Government and commitment of the Congress Party. The Forest Act was brought by the Congress party.

ಶ್ರೀ ಎನ್.ಹೆಚ್. ಕೋನರೆಡ್ಡಿ:- ಬೇರೆಯವರು ಇದ್ದಾಗ ಇದರ ಬಗ್ಗೆ ಚರ್ಚೆಯೇ ಆಗಲಿಲ್ಲ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ:- ಇಲ್ಲಿ ಕಾಂಗ್ರೆಸ್ ಪಾರ್ಟಿ ಬೇಡ. ನಿಮ್ಮ ಪಕ್ಷಕ್ಕೆ ಒಳ್ಳೆಯ ಹೆಸರು ಬರಲಿ. ದಯವಿಟ್ಟು ಮಂಡಿಸಿ, ನಿಮ್ಮ ಸರ್ಕಾರಕ್ಕೆ ಒಳ್ಳೆಯ ಹೆಸರು ಬರಲಿ.

ಉಪಾಧ್ಯಕ್ಷರು:- ಶಿವಮೂರ್ತಿಯವರೆ, ನೀವು deviate ಆಗಬೇಡಿ.

ಶ್ರೀ ಕೆ. ಶಿವಮೂರ್ತಿ:- ನಾವು ಮಾಡಿರುವದನ್ನು ನಾವು ಹೇಳಿಕೊಳ್ಳಬಾರದಾ? It is our manifesto, our Government. We have done that. Land Acquisition Act ಯಾರು ತಂದಿರುವುದು? Congress Party. ಅದನ್ನು amendment ಮಾಡಿದ್ದಾರೆ.

ಶ್ರೀ ಎನ್.ಹೆಚ್. ಕೋನರೆಡ್ಡಿ:- ಪಾರ್ಟಿ ಅಲ್ಲ, ಸರ್ಕಾರ, ನಮ್ಮ ಸರ್ಕಾರವೆಂದು ಹೇಳಿ. ಎಲ್ಲರಿಗೂ ಸರ್ಕಾರವಲ್ಲವೇ?

ಉಪಾಧ್ಯಕ್ಷರು:- ಆಯಿತು. ಶಿವಮೂರ್ತಿಯವರೆ ಮುಗಿಸಿ, ಮಾನ್ಯ ಕಾರಜೋಳರವರು.

ಶ್ರೀ ಕೆ. ಶಿವಮೂರ್ತಿ:- ನಾನು ಮುಗಿಸಿ ಬಿಡುತ್ತೇನೆ. ಕಾಮನ್ ಆಗಿ ನಮಗೂ ನಿಮಗೂ ಬಹಳ ಬೇಕಾಗಿರತಕ್ಕಂಥ ವಿಚಾರ ಇದು. ದಯವಿಟ್ಟು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಕಂದಾಯ ಮಂತ್ರಿಗಳು ಇದ್ದಾರೆ, ಕಂದಾಯ ಅದಾಲತ್‌ನಲ್ಲಿ ಒಂದು ಕಾಲ ಅನ್ನು ಹಾಕಿ. Periodic review ನಲ್ಲಿ, time bound ನಲ್ಲಿ ಇದು ಆಗಬೇಕು. ಏಕೆಂದರೆ, ಅವರಿಗೆ ಬರವಣಿಗೆಯಲ್ಲಿ ಆಗುವುದಿಲ್ಲ. ಅರ್ಜಿ ಕೊಡುವುದಕ್ಕೆ ಆಗುತ್ತದೋ ಇಲ್ಲವೋ ಆಫೀಸಿಗೆ ಅಡ್ಡಾಡುವುದಕ್ಕೆ ಆಗುತ್ತಿಲ್ಲ. ಅವರಿಗೆ ಬೇಕೆಂತಲೇ ಸಾಕಷ್ಟು ಕಿರುಕುಳ ಆಗುತ್ತಿದೆ. ದಯವಿಟ್ಟು ಇದನ್ನು ತಡೆಗಟ್ಟಬೇಕೆಂದು ಹೇಳುವುದಾದರೆ ಒಂದು ಕಾಲಂ ಅನ್ನು ಮಾಡಿ ಕಾಲಮಿತಿಯಲ್ಲಿ ಒಂದು ಇತಿಶ್ರೀಯನ್ನು ಹಾಡಬೇಕೆಂದು ಸರ್ಕಾರಕ್ಕೆ ನಾನು ಒತ್ತಾಯವನ್ನು ಮಾಡುತ್ತೇನೆ.

ಶ್ರೀ ಗೋವಿಂದ ಎಂ. ಕಾರಜೋಳ (ಮುಧೋಳ):- ಮಾನ್ಯ ಉಪಾಧ್ಯಕ್ಷರೆ, ಸರ್ಕಾರ ಯಾವರೀತಿ ಕೆಲಸ ಮಾಡುತ್ತದೆ ಎನ್ನುವುದಕ್ಕೆ ಪೇಪರ್ ಸಹ ತೆಗೆದುಕೊಂಡು ಬಂದಿದ್ದೇನೆ. 1981 ರಲ್ಲಿ ಅಂದಿನ Special Deputy Commissioner ಕೆ. ಕೇಶವರಾಜುರವರು 12 ಜನ ದಲಿತರಿಗೆ ಬಿಜಾಪೂರ ತಾಲ್ಲೂಕಿನ ಮಕನಾಪೂರ ಗ್ರಾಮದಲ್ಲಿ ಜಮೀನು ಕೊಡುತ್ತಾರೆ. ಹುಲ್ಲುಗಾವಲು ಮಾಡಿಕೊಂಡು ಜೀವನ ಮಾಡಿ ಎಂದು ಕೊಡುತ್ತಾರೆ.

ಅದನ್ನು ದಿನಾಂಕ: 25.09.2014 ಕ್ಕೆ ಬಿಜಾಪೂರ ತಹಶೀಲ್ದಾರ್‌ರವರು ಆದೇಶ ಮಾಡಿ police protection ತೆಗೆದುಕೊಂಡು 35 ವರ್ಷದ ನಂತರ ಅವರನ್ನು ಹೊರಗೆ ಹಾಕುತ್ತಾರೆ. Land Grant Committee ಮುಂದೆ Form No. 50 ಅನ್ನು ತುಂಬಿ ಕೊಟ್ಟರು ಅದನ್ನು reject ಮಾಡಿದ್ದಾರೆ. ಅಂದರೆ ಬಡವರ ಪರವಾಗಿ ಇರತಕ್ಕಂಥ ಸರ್ಕಾರ ಯಾವ ರೀತಿ ಕೆಲಸ ಮಾಡುತ್ತಿದೆ. ನಾನು ಏನು ಹೇಳುವುದಕ್ಕೆ ಬಯಸುತ್ತೇನೆಂದರೆ..

ಶ್ರೀ ಎಂ.ಬಿ. ಪಾಟೀಲ್:- ಅದು ಯಾವಾಗ ರಿಜೆಕ್ಟ್ ಆಗಿರುವುದು?

ಶ್ರೀ ಗೋವಿಂದ ಎಂ. ಕಾರಜೋಳ:- ನೀವು ಜಿಲ್ಲಾ ಉಸ್ತುವಾರಿ ಮಂತ್ರಿಗಳು.

ಶ್ರೀ ಕೆ.ಆರ್. ರಮೇಶ್ ಕುಮಾರ್:- ಅವರನ್ನು evict ಮಾಡುವುದಕ್ಕೆ notice ಕೊಟ್ಟರಲ್ಲಾ ಆಗ ನಿಮಗೆ ಆ ಜಾಗದಿಂದ ಬಿಜಾಪೂರದಲ್ಲಿ ಎಷ್ಟು ದೂರ?

ಶ್ರೀ ಗೋವಿಂದ ಎಂ. ಕಾರಜೋಳ:- 10 ಕಿ.ಮೀ. ದೂರ ಇರಬಹುದು. ನಾನು ಆಗ ಇರಲಾರದಕ್ಕೆ ಇಲ್ಲಿ ವಿಷಯ ತೆಗೆದುಕೊಂಡು ಬಂದಿದ್ದೇನೆ.

ಶ್ರೀ ಕೆ.ಆರ್. ರಮೇಶ್ ಕುಮಾರ್:- ನಿಮ್ಮ ಜಾಗದಲ್ಲಿ ನಾನು ಇದ್ದರೆ ಏನು ಮಾಡುತ್ತಿದ್ದೆ ಗೊತ್ತಾ?

ಶ್ರೀ ಗೋವಿಂದ ಎಂ. ಕಾರಜೋಳ:- ನಾನು details ಗೆ ಬರುತ್ತೇನೆ.

ಶ್ರೀ ಕೆ.ಆರ್. ರಮೇಶ್ ಕುಮಾರ್:- ಬಟನ್ ಬಿಚ್ಚಿ ನನ್ನ ಎದೆಗೆ ಗುಂಡು ಹೊಡೆಯಿರಿ ಎಂದು ನಾನು ನಿಲ್ಲುತಿದ್ದೆ.

ಶ್ರೀ ಗೋವಿಂದ ಎಂ. ಕಾರಜೋಳ:- ನಾನು details ಗೆ ಬರುತ್ತೇನೆ. ಮಕನಾಪೂರದ 12 ಜನ ದಲಿತ ಕುಟುಂಬದವರು 35 ವರ್ಷದಿಂದ ಆ ಜಮೀನಿನಲ್ಲಿದ್ದಾರೆ. ಇವತ್ತಿನ ಜಿಲ್ಲಾ ಉಸ್ತುವಾರಿ ಮಂತ್ರಿಗಳಾದ ಶ್ರೀ ಎಂ.ಬಿ. ಪಾಟೀಲವರಿಗೆ ಮತ್ತು ಅವರ ತಂದೆಯವರಿಗೂ ಆ ಜನ ಇವರಿಗೆ ಓಟು

ಹಾಕಿದ್ದಾರೆ. ಅವರನ್ನು 25ನೇ ಸೆಪ್ಟೆಂಬರ್ 2014 ರಂದು ಮಿಲಿಟರಿ ತರಹ ಎರಡು–ಮೂರು ಪೋಲೀಸ್ ವಾಹನಗಳನ್ನು ತೆಗೆದುಕೊಂಡು ಹೋಗಿ ಅವರನ್ನು ಹೊರಗೆ ಹಾಕುತ್ತಾರೆ.

ಶ್ರೀ ಎಂ.ಬಿ. ಪಾಟೀಲ್:– ಅದರ ಹಿಂದೆ ಏನೇನು ಆಯಿತು ಎನುವ sequence ಅನ್ನು ಹೇಳಿ. ತಾವು ಇದ್ದಾಗಲೂ ಸಹ ಕೆಲವೊಂದು orders ಆಗಿವೆ. ಯವ್ಯಾವಾಗ ಏನೇನು ಆಗಿವೆ ಎನ್ನುವುದನ್ನು ಹೇಳಿ. ಆ sequence ಬೇಕಾದರೆ ನಾನು ತರಿಸಿಕೊಡುತ್ತೇನೆ. ಈಗ ನನ್ನ ಹತ್ತಿರ ಇಲ್ಲ. ತಮಗೆ ಬೇಕಾದರ ತರಿಸಿ ಕೊಡುತ್ತೇನೆ. ಹಿಂದೆ ಪೈಪ್ ಲೈನ್ ತಂದಿರುವುದು. ಎಲ್ಲಾ,.. Eviction ಆಗಿದ್ದು ಆಯಿತು. ಅದರ ಹಿಂದೆ ಏನೇನು ಆಯಿತು ಎನ್ನುವುದನ್ನು ಕೊಡಿ.

ಶ್ರೀ ಗೋವಿಂದ ಎಂ. ಕಾರಜೋಳ:– ನಾನು ಪೂರ್ತಿ ಫೈಲ್ ಅನ್ನು ತಂದಿದ್ದೇನೆ. ನೀವು defend ಮಾಡಿಕೊಳ್ಳುವುದಕ್ಕೆ ಹೋಗಬೇಡಿ. ನೀವು ಕುಳಿತುಕೊಳ್ಳಿ ನಾನು ಹೇಳುತ್ತೇನೆ.

ಶ್ರೀ ಎಂ.ಬಿ. ಪಾಟೀಲ್:– ನಾನು defend ಮಾಡುತ್ತಿಲ್ಲ, ಹಿಂದೆ ಏನೇನು sequences ಆಗಿವೆ ಅವೆಲ್ಲವನ್ನು ನೀವು ಹೇಳಿ.

ಶ್ರೀ ಗೋವಿಂದ ಎಂ. ಕಾರಜೋಳ:– ಅವೆಲ್ಲವನ್ನು ನಾನು ತಂದಿದ್ದೇನೆ. ಈ ಫೈಲ್ ಅನ್ನು ನಿಮಗೆ ಕಳುಹಿಸಿ ಕೊಡುತ್ತೇನೆ. ಏಕೆಂದರೆ, ನೀವು ಜಿಲ್ಲಾ ಉಸ್ತುವಾರಿ ಮಂತ್ರಿಗಳಿದ್ದೀರಿ, ನಿಮಗೆ ಬಿಡುವು ಇಲ್ಲದಿದ್ದರೆ ನೀವು ಕುಳಿತು ಓದಿ. ಆ ಬಡ ಕುಟುಂಬಗಳನ್ನು ಹೊರಗೆ ಹಾಕಿ ಇವತ್ತು ಅವರನ್ನು ಬೀದಿ ಪಾಲು ಮಾಡಿದ್ದಾರೆ. ಒಂದು ಕಡೆ ಸರ್ಕಾರ ಬಡವರ ಪರವಾಗಿ ಇದ್ದೇವೆಂದು ಹೇಳುತ್ತಾರೆ. ಬಡವರಿಗೆ ಜಮೀನು ಕೊಟ್ಟಿದ್ದೇವೆಂದು ಮಾನ್ಯ ಶಿವಮೂರ್ತಿಯವರು ಹೇಳಿದರು, ಅವರು ಎದ್ದು ಹೋಗಿದ್ದಾರೆ. ದಿ:ದೇವರಾಜ್ ಅರಸುರವರು Land Reforms Act ಜಾರಿಗೆ ತಂದು ಒಳ್ಳೆಯ ಕೆಲಸ ಮಾಡಿದ್ದಾರೆ. ನಾವು ಅದನ್ನು ಇವತ್ತಿಗೂ ಅಭಿನಂದಿಸುತ್ತೇವೆ.

ಬಡವರಿಗೆ ಸಹಾಯ ಮಾಡಿದ್ದನ್ನು ಇವತ್ತಿಗೂ ಅಭಿನಂದಿಸುತ್ತೇವೆ. ಇಲ್ಲವೆಂದು ಹೇಳುವುದಿಲ್ಲ. ಇವತ್ತು ಮಾನ್ಯ ಸಿದ್ದರಾಮಯ್ಯನವರ ಸರ್ಕಾರದಲ್ಲಿ ಮಾನ್ಯ ಎಂ.ಬಿ. ಪಾಟೀಲ್‌ರವರು ಜಿಲ್ಲಾ ಉಸ್ತುವಾರಿ ಸಚಿವರಾಗಿರುವಾಗ ಇವರನ್ನು ಹೊರಗೆ ಹಾಕುತ್ತಾರೆ ಎಂದರೆ ಏನರ್ಥ?

ಶ್ರೀ ಎಂ.ಬಿ. ಪಾಟೀಲ್:- ಮಾನ್ಯ ಕಾರಜೋಳರವರೆ, ವಿಷಯ ಬಿಟ್ಟು ಹೇಳಬೇಡಿ. ನಾನು ನಾಳೆ ಅದಕ್ಕೆ ಉತ್ತರ ಹೇಳುತ್ತೇನೆ.

ಶ್ರೀ ಗೋವಿಂದ ಎಂ. ಕಾರಜೋಳ:- ದಯವಿಟ್ಟು ಕುಳಿತುಕೊಳ್ಳಿ, ಆನಂತರ ಉತ್ತರ ಹೇಳಿ. ನೀವು ಸರ್ಕಾರ ಅಲ್ಲವೇ? ನಾನು ಕೇಳುವುದಕ್ಕೆ ತಯಾರಿದ್ದೇನೆ. ಮಾನ್ಯ ಉಪಾಧ್ಯಕ್ಷರೆ, ಈ ತಹಶೀಲ್ದಾರರ ಮೇಲೆ criminal case ದಾಖಲೆ ಮಾಡಿ. ಒಂದು ಕಡೆ ನಮ್ಮ ಕಂದಾಯ ಮಂತ್ರಿಗಳು ಅತಿಕ್ರಮಣ ಮಾಡಿದ ಸಣ್ಣ ರೈತರಿಗೆ ನಾವು ಏನೂ ಮಾಡುವುದಿಲ್ಲ ಎಂದು ಹೇಳುತ್ತಾರೆ. ಫೋಟೋ ಸಮೇತ ಇದೆ. ಅವರು ಅತಿಕ್ರಮಣ ಮಾಡಿಲ್ಲ. ಅವರಿಗೆ ಒಂದು ಸೊಸೈಟಿ ಮಾಡಿಕೊಂಡು, ಹುಲ್ಲುಗಾವಲು ಮಾಡಿಕೊಳ್ಳಲು ಕೊಟ್ಟಿದ್ದಾರೆ. ಇಲ್ಲಿ ನಮ್ಮ ಮಂತ್ರಿಗಳು ಹೇಳುತ್ತಾರೆ. ಇಷ್ಟೆಲ್ಲಾ ಇದ್ದಾಗಲೂ ಇವರನ್ನು ಹೊರಗಡೆ ಹಾಕುತ್ತಾರೆ ಎಂದರೆ ಆ ತಹಶೀಲ್ದರರನ್ನು dismiss ಮಾಡಬೇಕು. ಅ ದಲಿತ ಕುಟುಂಬಗಳ ಮೇಲೆ ದೌರ್ಜನ್ಯ ಮಾಡಿದ್ದಕ್ಕೆ ಅವರ ಮೇಲೆ criminal case ದಾಖಲೆ ಮಾಡಬೇಕು. Atrocities Act Section (4) ಕೆಳಗಡೆ ಅವರನ್ನು ಬಂಧಿಸಿ ತೆಗೆದುಕೊಂಡು ಬರಬೇಕು. ಆ ರೀತಿ ಮಾಡಿದಾಗ ಮಾತ್ರ ಬಡವರಿಗೆ ನ್ಯಾಯ ಸಿಗುತ್ತದೆ. ಮುಂದೆ ಮಾಡತಕ್ಕಂತಹವರಿಗೆ ಈ ರೀತಿ ಮಾಡಬಾರದೆಂದು ಗೊತ್ತಾಗುತ್ತದೆ. ಇದು ಒಂದು ಭಾಗ. ಇನ್ನೊಂದು ನನ್ನ ಮತಕ್ಷೇತ್ರದ ಬೆಳಗಲಿ ಗ್ರಾಮದಲ್ಲಿ 1938–39 ರಲ್ಲಿ ಅಂದಿನ ಮುಂಬಯಿ ಪ್ರಾಂತ್ಯದೊಳಗೆ 200 ಎಕರೆ ಜಮೀನನ್ನು ಅರಣ್ಯ ಇಲಾಖೆಗೆ transfer ಮಾಡುತ್ತಾರೆ. ಅವು records change ಆಗಿಲ್ಲ, ಕಂದಾಯ ಭೂಮಿ ಎಂದು ಹಾಗೆಯೇ ಉಳಿದಿದೆ. ಅದನು 2002–03 ರಲ್ಲಿ ಒಬ್ಬರು ತಹಶೀಲ್ದಾರರು 60 ಬಡ ಕುಟುಂಬಗಳಿಗೆ ಹಂಚಿಕೆ ಮಡುತ್ತಾರೆ. ಹಂಚಿಕೆ ಮಾಡಿದ್ದನ್ನು ಅರಣ್ಯ ಇಲಾಖೆಯವರು

ಬಂದು ಅವರ ಮೇಲೆ ದೌರ್ಜನ್ಯ ಮಾಡುತ್ತಾರೆ. ಅವರು develop ಮಾಡಿಕೊಂಡಿದ್ದಾರೆ, ಉಳುಮೆ ಮಾಡುತ್ತಿದ್ದಾರೆ, ದಲಿತ ಕುಟುಂಗಳಿವೆ, ಬಡವರಿದ್ದಾರೆ, ಹಿಂದುಳಿದವರಿದ್ದಾರೆ. ಅವರನ್ನು ಹೊರಗೆ ಹಾಕುತ್ತಾರೆ. ಅರಣ್ಯ ಸಚಿವರೆ, ಇದು ಯಾರ ತಪ್ಪು? 1938–39 ರಲ್ಲಿ ಮುಂಬಯಿ ಸರ್ಕಾರ ಅರಣ್ಯ ಇಲಾಖೆಗೆ handover ಮಾಡಿದಾಗ revenue records ಅನ್ನು change ಮಾಡಿಕೊಳ್ಳಬೇಕಾಗಿತ್ತು. ನೂರು ವರ್ಷಗಟ್ಟಲೆ revenue records ಅನ್ನು change ಮಾಡಿಕೊಳ್ಳದೇ ಹಾಗೆಯೇ ಬಿಟ್ಟು ಈಗಗ ಅದು ಎಂದು forest land ಬಂದರೆ ಹೇಗೆ?

ಶ್ರೀ ಬಿ. ರಮಾನಾಥ ರೈ:– ಇಲ್ಲಿಯವರೆಗೂ ಏಕೆ change ಮಾಡಲಿಲ್ಲ?

ಶ್ರೀ ಗೋವಿಂದ ಎಂ. ಕಾರಜೋಳ:– ನಾನೇನು ಹೇಳಬೇಕು? ಸರ್ಕಾರ ನೀವು ಹೇಳಬೇಕು. ತಾವು ದಯವಿಟ್ಟು ಕುಳಿತುಕೊಳ್ಳಿ. ತಾವು ಉತ್ತರ ನೀಡುವಾಗ ಹೇಳಿ.

ಶ್ರೀ ಬಿ. ರಮಾನಾಥ ರೈ:– ಮಾನ್ಯ ಕಾರಜೋಳರವರೆ, ತಾವು ಉಸ್ತುವಾರಿ ಮಂತ್ರಿಗಳಾಗಿದ್ದೀರಿ. ನಿಮ್ಮ ಸರ್ಕಾರದಲ್ಲಿ ತಾವು ಮಂತ್ರಿಗಳೂ ಆಗಿದ್ದೀರಿ. ನೀವು ಸಾಮಾಜಿಕ ನ್ಯಾಯದಿಂದ ವಂಚಿತರಾಗಿರುವವರ ಪರವಾಗಿ ಇರುವಂತಹ ಒಂದು ಇಲಾಖೆಯನ್ನು ವಹಿಸಿಕೊಂಡಿರತಕ್ಕಂಥವರರು. ನೀವು ಆ ಸಮಸ್ಯೆಯನ್ನು ಏಕೆ ಇಲ್ಲಿಯವರೆಗೂ ಸರಿಪಡಿಸಲು ಆಗಲಿಲ್ಲ ಎಂದು ನಮಗೆ ಪ್ರಶ್ನೆ ಬರುತ್ತದೆ.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ:– ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಬಿ. ರಮಾನಾಥ ರೈ:– ನಮಗೂ ಕೂಡ ಬಡವರ ಬಗ್ಗೆ ಸಾಕಷ್ಟು ಕಾಳಜಿ ಇದೆ. ಸಾಮಾಜಿಕ ಬದುಕಿನಲ್ಲಿ ನಾವೇನು nomination ಆಗಿ ಈ ಸಾಲಿನಲ್ಲಿ ಬಂದು ಕುಳಿತುಕೊಂಡಿಲ್ಲ. ನಾನು 5–6 ಬಾರಿ ಗೆದ್ದು ಇಲ್ಲಿಗೆ

ಬಂದಿದ್ದೇನೆ. ಬಡವರ, ದೀನದಲಿತರ, ದುರ್ಬಲರ ಸಾಮಾಜಿಕ ವಂಚಿತರ ಪರವಾಗಿ ನಿರಂತರವಾಗಿ ಕೆಲಸ ಮಾಡುತ್ತಿದ್ದೇವೆ.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ:– ಮಾನ್ಯ ರಮಾನಾಥ ರೈರವರೆ, ನಾನು ಹೇಳುವುದನ್ನು ಮೊದಲು ಪೂರ್ತಿ ಕೇಳಿಸಿಕೊಳ್ಳಿ. ಆಮೇಲೆ ಉತ್ತರ ನೀಡಿ.

(ಗೊಂದಲ)

ಶ್ರೀ ಬಿ. ರಮಾನಾಥ ರೈ:– ನನ್ನ ಮಾತನ್ನೂ ಕೇಳಿ.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ:– ಇನ್ನು ನಾನು ಪೂರ್ತಿ ಹೇಳಿಲ್ಲ. ನಿಮಗೇನೂ ಗೊತ್ತಾಗಿಲ್ಲ. ಉತ್ತರ ಏನು ಹೇಳುತ್ತೀರಿ?

(ಗೊಂದಲ)

ಶ್ರೀ ಜಿ.ಹೆಚ್. ಶ್ರೀನಿವಾಸ್:– ಮಾನ್ಯ ಸಚಿವರು ಮಾತನಾಡಲಿ ಬಿಡಿ.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ:– ಮಾನ್ಯ ಉಪಾಧ್ಯಕ್ಷರೆ, ಸರ್ಕಾರದ ಭೂಮಿ ಖಾಲಿ ಬಿದ್ದಿತ್ತು ಎಂದು ಅರಣ್ಯ ಇಲಾಖೆ 1938–39 ನೇ ಸಾಲಿನಲ್ಲಿ ಮುಂಬಯಿ ಸರ್ಕಾರ ಇದ್ದಂತಹ ಸಂದರ್ಭದಲ್ಲಿ transfer ಮಾಡಿದ ಮೇಲೆ ಕಂದಾಯ ಇಲಾಖೆ ಹಾಗೂ ಅರಣ್ಯ ಇಲಾಖೆಯವರು ಸೇರಿ ಅದನ್ನು records or righ change ಮಾಡಿಕೊಳ್ಳಬೇಕಾಗಿತ್ತು. ಮಾಡಿಲ್ಲ. ಕಂದಾಯ ಭೂಮಿ ಎಂದು ಉಳಿದ ಕೂಡಲೇ 2002–03 ರಲ್ಲಿ ಅದನ್ನು ಹಂಚಿಕೆ ಮಾಡುತ್ತಾರೆ. ಇವತ್ತು ಅದನ್ನು ಹೊರಗೆ ಹಾಕಲು ಬರುತ್ತಾರೆ. ಇದು ಯಾವ ನ್ಯಾಯ? ಸರ್ಕಾರವೇ ಕೊಟ್ಟಿದ್ದು. . . .

ಶ್ರೀ ಬಿ. ರಮಾನಾಥ ರೈ:– ಮಾನ್ಯ ಉಪಾಧ್ಯಕ್ಷರೆ,. . .

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ:- ಮಾನ್ಯ ಸಚಿವರೆ ದಯವಿಟ್ಟು ತಾವು ಆನಂತರ ಉತ್ತರ ಹೇಳಿ.

(ಗೊಂದಲ)

ಶ್ರೀ ಬಿ. ರಮಾನಾಥ ರೈ:- ಮಾನ್ಯ ಉಪಾಧ್ಯಕ್ಷರೆ, ನನಗೊಂದು ಅವಕಾಶ ಕೊಡಿ. ಏಕೆಂದರೆ, ಮತ್ತೆ ಉತ್ತರ ಕೊಡಿ ಎಂದು ಹೇಳಿದರೆ ಅದು ಬೇರೆ ವಿಚಾರ.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ:- ತಾವು ಉತ್ತರ ಕೊಡುವುದು ಬೇಡ.

(ಗೊಂದಲ)

ಶ್ರೀ ಬಿ. ರಮಾನಾಥ ರೈ:- ಸಂದರ್ಭಾನುಸರವಾಗಿ ತಾವು ಮಾತನಾಡುವಾಗ ಕೆಲವಾರು ವಿಚಾರಗಳಿಗೆ ನಾವು ಮಧ್ಯಪ್ರವೇಶ ಮಾಡಿ ಮಾತನಾಡಬೇಕು. ಅದು ಮಾಡಲೇಬೇಕಾಗಿದೆ. ಇಲ್ಲವೆಂದರೆ ತಪ್ಪು ಸಂದೇಶ ಹೋಗುತ್ತದೆ ಎನ್ನುವ ಉದ್ದೇಶಕ್ಕಾಗಿ ನಾನು ಮಾತನಾಡುತ್ತೇನೆ.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ:- ಆಯಿತು ಹೇಳಿ.

(ಗೊಂದಲ)

ಶ್ರೀ ಬಿ. ರಮಾನಾಥ ರೈ:- ನಾನು ಯಾವಾಗಲೂ ಕಡಿಮೆ ಮಾತನಾಡುವುದು. ನನಗೆ ಮಾತನಾಡಬೇಕು ಎಂದು ಅನಿಸುವಂಥದ್ದು ಇಲ್ಲ. ತಾವು ನಮ್ಮನ್ನು ಪ್ರಶ್ನೆ ಮಾಡುವಂತಹ ಸಂದರ್ಭದಲ್ಲಿ ನಾವು ಉತ್ತರವನ್ನು ಕೊಡಬೇಕಾಗುತ್ತದೆ. ನಾವು ಖಂಡಿತವಾಗಿಯೂ ಒಕ್ಕಲೆಬ್ಬಿಸುವಂತಹ ವರ್ಗಕ್ಕೆ ಸೇರಲಿಲ್ಲ. ಆ ಪಕ್ಷದಲ್ಲಿಯೂ ನಾವು ಇಲ್ಲ. ಇವತ್ತು ನನ್ನ ತಂದೆ ಸಾಕಷ್ಟು

ಜಮೀನನ್ನು ಕಳೆದುಕೊಂಡವರು. ಜಮೀನು ಕಳೆದುಕೊಂಡ ಸಂದರ್ಭದಲ್ಲಿ ಆಗಿನ ಸರ್ಕಾರ ...

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ:– ನಿಮ್ಮ ಹಿಂದೆ ಕುಳಿತಿದ್ದಾರಲ್ಲಾ ಅವರೂ ಜಮೀನು ಕಳೆದುಕೊಂಡಿದ್ದಾರೆ. ಅವರ ತಂದೆಯವರು ಬಿಟ್ಟುಕೊಟ್ಟಿದ್ದಾರೆ.

(ಗೊಂದಲ)

ಶ್ರೀ ಬಿ. ರಮಾನಾಥ ರೈ:– ನಾನು ಹೇಳುತ್ತಿದ್ದೇನೆ.

(ಗೊಂದಲ)

ಉಪಾಧ್ಯಕ್ಷರು:– ಅದಕ್ಕೂ ಇದಕ್ಕೂ ಏನು ಸಂಬಂಧ?

(ಗೊಂದಲ)

ಶ್ರೀ ಬಿ. ರಮಾನಾಥ ರೈ:– ನಾವು ಭೂಮಿಯನ್ನು ಕಳೆದುಕೊಂಡರೂ ಕೂಡ ಇವತ್ತು ದೇವರ ದೆಯಿಯಿಂದ ಭೂಮಿ ಕೊಟ್ಟವರ ಪಕ್ಷದಲ್ಲಿದ್ದೇವೆ. ಸತ್ಯ ಹೇಳುತ್ತಿದ್ದೇನೆ. ನನಗೆ ಸಂತೋಷವಿದೆ.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ:– ಮತ್ತೆ ಈಗ ಕಸಿದುಕೊಳ್ಳುವ ಮಂತ್ರಿಗಳಾಗಿದ್ದೀರಾ?

(ಗೊಂದಲ)

ಶ್ರೀ ಬಿ. ರಮಾನಾಥ ರೈ:– ನಮ್ಮ ಗ್ರಾಮದಲ್ಲಿ ಪಟ್ಟದಾರರು. . .

(ಗೊಂದಲ)

ಶ್ರೀ **ಗೋವಿಂದ ಎಂ. ಕಾರಜೋಳ**:- ಮಾನ್ಯ ಉಪಾಧ್ಯಕ್ಷರೆ, ಚರ್ಚೆ ಎಲ್ಲೆಲ್ಲೋ ಹೋಗುತ್ತಿದೆ. ದಯವಿಟ್ಟು ಬೇಡ. ಅವರು ಉತ್ತರ ನೀಡಬೇಕಾದರೆ ಹೇಳಲಿ.

(ಗೊಂದಲ)

ಶ್ರೀ **ಜಿ.ಹೆಚ್. ಶ್ರೀನಿವಾಸ್** :- ಮಾನ್ಯ ಸಚಿವರು ಮಾತನಾಡಲು ಬಿಡಿ. ಪೂರ್ತಿ ಮಾತನಾಡಲಿ. ಕುಳಿತುಕೊಳ್ಳಿ.

(ಗೊಂದಲ)

ಶ್ರೀ **ಗೋವಿಂದ ಎಂ. ಕಾರಜೋಳ**:- ಇಲ್ಲಿ ಬಹಳ ಜನ ಇದ್ದಾರೆ. ಭೂಮಿ ಹಂಚಿದನ್ನು ನಾನು ಇಲ್ಲಿ ಕೇಳುವುದಕ್ಕೆ ಕುಳಿತಿಲ್ಲ. ಇವತ್ತು ಭೂಮಿ ಹಂಚಿರುವುದನ್ನು ಕೇಳುವ ಸಲುವಾಗಿ ನಾನು ಬಂದಿಲ್ಲ.

ಶ್ರೀ **ಬಿ. ರಮಾನಾಥ ರೈ**:- ನಾವು ಒಕ್ಕಲೆಬ್ಬಿಸುವರ ಸಾಲಿಗೆ ಸೇರಿಲ್ಲ.

(ಗೊಂದಲ)

ಶ್ರೀ **ಗೋವಿಂದ ಎಂ. ಕಾರಜೋಳ**:- ಬಡವರಿಗೆ ಅನ್ಯಾಯವಾಗಿದೆ. ನ್ಯಾಯ ದೊರಕಿಸಿಕೊಡಿ ಎಂದು ಹೇಳುವುದಕ್ಕೆ ಬಂದಿದ್ದೇನೆ.

(ಗೊಂದಲ)

ಶ್ರೀ **ಜಿ.ಹೆಚ್. ಶ್ರೀನಿವಾಸ್** :- ಮಾನ್ಯ ಸಚಿವರು ಮಾತನಾಡಲಿ ಬಿಡಿ. ಪೂರ್ತಿ ಮಾತನಾಡಲಿ.

(ಗೊಂದಲ)

ಶ್ರೀ **ಗೋವಿಂದ ಎಂ. ಕಾರಜೋಳ**:- ಹೊರಗಡೆ ಹಾಕಿದ್ದಾರೆ ಏನು ನೋಡಿಕೊಳ್ಳುತ್ತೀರಿ? ಹೊರಗಡೆ ಹಾಕಿದ್ದಾರೆ. ನಿಮ್ಮ Forest ಅಧಿಕಾರಿಗಳ ಮೇಲೆ action ತೆಗೆದುಕೊಳ್ಳುತ್ತೀರಾ? ಹೊರಗೆ ಹಾಕಿದವರ ಮೇಲೆ action ತೆಗೆದುಕೊಳ್ಳಿ.

(ಗೊಂದಲ)

ಶ್ರೀ ಬಿ. ರಮಾನಾಥ ರೈ:- ಇಲ್ಲಿಯವರೆಗೂ ಬಡವರಿಗೆ ಜಮೀನು ಕೊಟ್ಟವರು ಯಾರು?

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ:- ಬಡವರಿಗೆ ಜಮೀನನ್ನು ಕರ್ನಾಟಕ ಸರ್ಕಾರ ಕೊಟ್ಟಿದೆ.

(ಗೊಂದಲ)

ಶ್ರೀ ಬಿ. ರಮಾನಾಥ ರೈ:- ಆಯಿತು ಯಾವ ಕಾಲದಲ್ಲಿ ಕೊಟ್ಟಿದ್ದಾರೆ? ಯಾವ ರೀತಿಯಲ್ಲಿ ಆಯಿತು?

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ:- ಯಾರೂ ಕೊಟ್ಟಿಲ್ಲ.

(ಗೊಂದಲ)

ಶ್ರೀ ಬಿ. ರಮಾನಾಥ ರೈ:- ಅಷ್ಟು ಸುಲಭದಲ್ಲಿ ಹೇಳತಕ್ಕಂಥ ಮಾತಲ್ಲ.

(ಗೊಂದಲ)

ಉಪಾಧ್ಯಕ್ಷರು:- ಆಯಿತು ಬಿಡಿ. ಅವರು ಮಾತನಾಡಲಿ. Conclude ಮಾಡಿ.

(ಗೊಂದಲ)

ಶ್ರೀ ಜಿ.ಹೆಚ್. ಶ್ರೀನಿವಾಸ್ :- ಯಾವ ಸರ್ಕಾರ ಎಂದು ಹೇಳಿ.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ:- ಕುಳಿತುಕೊಳ್ಳಿ. ವಿಷಯ ಗೊತ್ತಿಲ್ಲದೇ ಏನು ಮಾತನಾಡುತ್ತೀರಿ? ಮಾತನಾಡಬೇಡಿ.

(ಗೊಂದಲ)

ಶ್ರೀ ಜಿ.ಹೆಚ್. ಶ್ರೀನಿವಾಸ್ :– ವಿಷಯ ಹೇಳಿ.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ:– ನೀವು ವಿಷಯ ತಿಳಿದುಕೊಂಡು ಮಾತನಾಡಿ.

(ಗೊಂದಲ)

ಶ್ರೀ ಬಿ. ರಮಾನಾಥ ರೈ:– ಮಾನ್ಯ ಉಪಾಧ್ಯಕ್ಷರೆ,. . .

(ಗೊಂದಲ)

ಉಪಾಧ್ಯಕ್ಷರು:– ಮಾನ್ಯ ಸಚಿವರೆ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ:– ಮಾನ್ಯ ಸಚಿವರೆ ದಯವಿಟ್ಟು ಕುಳಿತುಕೊಳ್ಳಿ. 2002–03 ರಲ್ಲಿ . .. .

(ಗೊಂದಲ)

ಶ್ರೀ ಕೆ. ಅಭಯಚಂದ್ರ:– ಮಾನ್ಯ ಕಾರಜೋಳರವರೆ, ನಾವು ಸರ್ಕಾರದ ಪರವಾಗಿ ಹೇಳಿದರೆ ಏನಾಗುತ್ತದೆ?

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ:– ನೀವೆಲ್ಲಾ ಜಮೀನ್ದಾರರ ಪರವಾಗಿದ್ದೀರಿ ಕುಳಿತುಕೊಳ್ಳಿ ನಮಗೆ ಗೊತ್ತಿದೆ.

(ಗೊಂದಲ)

ಶ್ರೀ ಬಿ. ರಮಾನಾಥ ರೈ:– ಬಡವರ ಪರವಾಗಿರುವ ಪಕ್ಷ ಯಾವುದು ಎನ್ನುವುದು ಇಡೀ ದೇಶಕ್ಕೆ ಗೊತ್ತಿದೆ. ಎಡ ಪಂಕ್ತಿಯವರು ಯಾರು, ಬಲ ಪಂಕ್ತಿಯವರು ಯಾರು ಎನ್ನುವುದು ಗೊತ್ತಿದೆ. ಎಡ ಪಂಕ್ತಿ ಚಳುವಳಿಯ ಮತದಲ್ಲಿ ನಾವು ಬಂದಿರುವುದು.

(ಗೊಂದಲ)

ಶ್ರೀ ಕೆ. ಅಭಯಚಂದ್ರ:- ಒಕ್ಕಲೆಬ್ಬಿಸಿ ಎಲ್ಲಾ ನೀವೇ ಮಾತನಾಡುತ್ತಿದ್ದೀರಿ.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ:- ಮಾನ್ಯ ಉಪಾಧ್ಯಕ್ಷರೆ, ನಾನು yield ಆಗಿಲ್ಲ. ದಯಮಾಡಿ ಮಾನ್ಯ ಮಂತ್ರಿಯವರು ಎದ್ದು ಈ ರೀತಿ ಮಾತನಾಡುವುದಲ್ಲ. ಸರ್ಕಾರ ನಡೆಸುತ್ತೀರಿ. ಅನ್ಯಾಯವಾಗಿರುವುದನ್ನು ಕೇಳಿ. ನ್ಯಾಯ ದೊರಕಿಸಿಕೊಡುತ್ತೇನೆ ಎಂದು ಹೇಳಿ.

(ಗೊಂದಲ)

ಶ್ರೀ ಕೆ. ಅಭಯಚಂದ್ರ:- ಅನ್ಯಾಯ ಯಾರ ಕಾಲದಲ್ಲಿ ಆಗಿದ್ದು?

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ:- ಮಾನ್ಯ ಜೈನ್‌ರವರೆ ನಮ್ಮ ಕಾಲದಲ್ಲಿ ಅನ್ಯಾಯವಾಗಿಲ್ಲ. ನಿಮ್ಮ ಕಾಲದಲ್ಲಿ ಆಗುತ್ತಿದೆ.

(ಗೊಂದಲ)

ಉಪಾಧ್ಯಕ್ಷರು:- ಅವೆಲ್ಲಾ ಈಗ ಬೇಡ. ಮಾನ್ಯ ಕಾರಜೋಳರವರೆ ತಾವು ಮಾತನಾಡುವದನ್ನು ಪೂರೈಸಿ.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ:- ಸೆಪ್ಟೆಂಬರ್ 2014 ರಲ್ಲಿ ಬಿಜೆಪಿ ಸರ್ಕಾರ ಇದೆಯೇ?

(ಗೊಂದಲ)

ಶ್ರೀ ಕೆ. ಅಭಯಚಂದ್ರ:- ಸೆಪ್ಟೆಂಬರ್ 2013 ರಂದು ಹೈಕೋರ್ಟ್‌ಗೆ affidavit ಕೊಟ್ಟವರು ಯಾರು?

(ಗೊಂದಲ)

ಶ್ರೀ **ಬಿ. ರಮಾನಾಥ ರೈ**:- ಈಗ ಹಕ್ಕುಪತ್ರ ಸಿಗಬೇಕಾದರೆ ಅದಕ್ಕೆ ಕಾರಣ ದಿವಂಗತ ದೇವರಾಜ ಅರಸುರವರು, ಅದನ್ನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ.

(ಗೊಂದಲ)

ಶ್ರೀ **ಗೋವಿಂದ ಎಂ. ಕಾರಜೋಳ**:- ನಿಮಗೆ ಬಡವರಿಗೆ ನ್ಯಾಯ ದೊರಕಿಸಿಕೊಡುವಂತಹ ಮನಸ್ಸಿನಲ್ಲ. ಅದಕ್ಕಾಗಿ ಮಧ್ಯಪ್ರವೇಶ ಮಾಡುತ್ತಿದ್ದೀರಿ.

(ಗೊಂದಲ)

ಶ್ರೀ **ಬಿ. ರಮಾನಾಥ ರೈ**:- ನಿಮಗಿಲ್ಲ.

(ಗೊಂದಲ)

ಶ್ರೀ **ಕೆ. ಅಭಯಚಂದ್ರ**:- ಬಡವರ ಬಗ್ಗೆ ನಿಮಗೇನು ಕಳಕಳಿ ಇದೆ?

(ಗೊಂದಲ)

ಶ್ರೀ **ಗೋವಿಂದ ಎಂ. ಕಾರಜೋಳ**:- ಬಡವರ ಬಗ್ಗೆ ಕಳಕಳಿ, ಕಾಳಜಿ ಇದ್ದಿದ್ದರೆ ನೀವು ಈ ರೀತಿ ಕೆಲಸ ಮಾಡುತ್ತಿರಲಿಲ್ಲ.

(ಗೊಂದಲ)

ಶ್ರೀ **ಎಂ.ಪಿ. ಅಪ್ಪಚ್ಚುರಂಜನ್**:- ನಿಮ್ಮ ಸರ್ಕಾರದ ಅವಧಿಯಲ್ಲಿ ದೇವರಾಜ ಅರಸುರವರನ್ನು ಹೊರಗಡೆ ಹಾಕಿದ್ದೀರಿ.

(ಗೊಂದಲ)

ಶ್ರೀ **ಬಿ. ರಮಾನಾಥ ರೈ**:- ನೀವು ಬಲಾಢ್ಯರು. ನಾವು ಸಮಾಜದ ದುರ್ಬಲ ವರ್ಗದವರ ಪರವಾಗಿರುವಂಥವರು.

(ಗೊಂದಲ)

ಶ್ರೀ **ಗೋವಿಂದ ಎಂ. ಕಾರಜೋಳ**:- ಬಡವರಿಗೆ ಅನ್ಯಾಯ ಮಾಡಿದಂಥವರು, ಬಡವರ ಬಗ್ಗೆ ನೀವು ಮಾತನಾಡುತ್ತೀರಾ? ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಎಂ.ಪಿ. ಅಪ್ಪಚ್ಚುರಂಜನ್:– ಅದೇ ಕಾಂಗ್ರೇಸ್‌ನವರು ದೇವರಾಜು ಅರಸುರವರನ್ನು ಹೊರಗಡೆ ಹಾಕಿದ್ದೀರಿ ಅಲ್ಲವೇ?

(ಗೊಂದಲ)

ಶ್ರೀ ಬಿ. ರಮಾನಾಥ ರೈ:– ಕಾಂಗ್ರೆಸ್ ಯಾವತ್ತೂ ಬಡವರ ಪರವಾಗಿರುವಂಥದ್ದು. ದುರ್ಬಲ ವರ್ಗದವರ ಪರವಾಗಿರುವಂಥದ್ದು.

(ಗೊಂದಲ)

ಶ್ರೀ ಎಂ.ಪಿ. ಅಪ್ಪಚ್ಚುರಂಜನ್:– ದೇವರಾಜು ಅರಸುರವರನ್ನು ಕಾಂಗ್ರೆಸ್‌ನವರು ಹೊರಗಡೆ ಹಾಕಿದರು.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ:– ಇವರೆಲ್ಲಾ ಯಾರ agent ರಾಗಿ ಭೂಮಿಯನ್ನು ಪಡೆದುಕೊಂಡಿದ್ದಾರೆ ಎನ್ನುವುದು ಗೊತ್ತಿದೆ.

(ಗೊಂದಲ)

ಉಪಾಧ್ಯಕ್ಷರು:– ಮಾನ್ಯ ಕಾರಜೋಳರವರೆ conclude ಮಾಡಿ.

(ಗೊಂದಲ)

ಶ್ರೀ ಕೆ. ಅಭಯಚಂದ್ರ:– ಯಾರು Agent?

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ:– ಕುಳಿತುಕೊಳ್ಳಿ. ಮಾನ್ಯ ಉಪಾಧ್ಯಕ್ಷರೆ, ನಾನು ಮಾತನಾಡುತ್ತಿದ್ದೇನೆ. ಅವರಿಗೆ ಕುಳಿತುಕೊಳ್ಳಲು ಹೇಳಿ.

(ಗೊಂದಲ)

ಶ್ರೀ ಕೆ. ಅಭಯಚಂದ್ರ:– ಬನ್ನಿ ಎಲ್ಲಾ ರೆಕಾರ್ಡ್ಸ್ ಅನ್ನು ತೆಗೆಸಲಿ. ಯಾರ್ಯಾರದ್ದು ಇದೆ ಎನ್ನುವುದನ್ನು ಹೇಳಲಿ.

(ಗೊಂದಲ)

ಶ್ರೀ ಪಿ. ರಾಜೀವ್:- ಮಾನ್ಯ ಉಪಾಧ್ಯಕ್ಷರೆ, ವಿಷಯವನ್ನು ಬಿಟ್ಟು ಎಲ್ಲೆಲ್ಲೋ ಚರ್ಚೆಗೆ ಹೋಗುತ್ತಿದ್ದಾರೆ.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ:- ಕುಳಿತುಕೊಳ್ಳಿ. ನನಗೂ ಗೊತ್ತಿದೆ.

(ಗೊಂದಲ)

ಶ್ರೀ ಬಿ. ರಮಾನಾಥ ರೈ:- ಕುಳಿತುಕೊಳ್ಳಿ ಎಂದು ಹೇಳುವುದಕ್ಕೆ ನೀವು ಯಾರು? Who are you to say?

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ:- ಕುಳಿತುಕೊಳ್ಳಿ, ನಿಮ್ಮ ತಾಕತ್ತು ಗೊತ್ತಿದೆ.

(ಗೊಂದಲ)

ಶ್ರೀ ಎಂ.ಬಿ. ಪಾಟೀಲ್:- ಮಾನ್ಯ ಕಾರಜೋಳರವರೆ, ರಮಾನಾಥ ರೈರವರೂ ಭೂಮಿಯನ್ನು ಕಳೆದುಕೊಂಡಿದ್ದಾರೆ.

(ಗೊಂದಲ)

ಶ್ರೀ ಬಿ. ರಮಾನಾಥ ರೈ:- ನಾವು ಇಲ್ಲಿಯವರೆಗೂ ಒಂದು ಇಂಚು ಭೂಮಿಯನ್ನೂ ಅತಿಕ್ರಮಣ ಮಾಡಿಲ್ಲ ಗೊತ್ತೇ? ನಾವು ರೈತರು ಸುತ್ತಮುತ್ತಲು ಒಂದು ಇಂಚು ಭೂಮಿಯನ್ನೂ ಅತಿಕ್ರಮಣ ಮಾಡಿಲ್ಲ.

(ಗೊಂದಲ)

ಶ್ರೀ ಕೆ. ಅಭಯಚಂದ್ರ:- ಮಾನ್ಯ ಉಪಾಧ್ಯಕ್ಷರೆ, ನಾವು ನೋಡುತ್ತಿದ್ದೇವೆ, ಅವರು ಬಾಯಿಗೆ ಬಂದ ಹಾಗೆ ಮಾತನಾಡುತ್ತಿದ್ದಾರೆ.

(ಗೊಂದಲ)

ಉಪಾಧ್ಯಕ್ಷರು:- ಕುಳಿತುಕೊಳ್ಳಿ. ಮಾನ್ಯ ಕಾರಜೋಳರವರೆ conclude ಮಾಡಿ.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ:– ಮಾನ್ಯ ಉಪಾಧ್ಯಕ್ಷರೆ, ನಾನು yield ಆಗಿಲ್ಲ. ಮೀನುಗಾರಿಕೆ ಸಚಿವರಾದ ಮಾನ್ಯ ಜೈನ್‌ರವರು, ಅರಣ್ಯ ಸಚಿವರಾದ ರಮಾನಾಥ ರೈರವರು ತಾಯಿ ಹೊಟ್ಟೆಯಿಂದ ಹುಟ್ಟಿ ಬರುವಾಗ ಭೂಮಿಯನ್ನು ತಲೆ ಮೇಲೆ ಹೊತ್ತುಕೊಂಡು ಬಂದಿದ್ದಾರೆ. ದೇಶದಲ್ಲಿ ಬಡವರು, ದಲಿತರು ಏನಿದ್ದಾರಲ್ಲಾ ಅವರು ಖಾಲಿ ಬಂದಿದ್ದಾರೆ.

(ಗೊಂದಲ)

ಶ್ರೀ ಬಿ. ರಮಾನಾಥ ರೈ:– ನಾವು ಬಡವರ ಪರವಾಗಿ ನಿಂತವರು.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ:– ನೀವು ಯಾರ ಪರವಾಗಿದ್ದೀರಿ ಎನ್ನುವುದು ಗೊತ್ತಿದೆ. ಕುಳಿತುಕೊಳ್ಳಿ ನಾವು ಹೇಳುವಾಗ ಕೇಳಬೇಕು.

(ಗೊಂದಲ)

ಶ್ರೀ ಬಿ. ರಮಾನಾಥ ರೈ:– ಬಡವರ ಬಗ್ಗೆ ನಮಗೆ ಗೌರವ ಇದೆ.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ:– ನಿಮ್ಮ ಉತ್ತರವನ್ನು ಅದೇ ದಾಟಿಯಲ್ಲಿ ಹೇಳಿ ನಾನು ಕೇಳಲಿಕ್ಕೆ ತಯಾರಿದ್ದೇನೆ.

(ಗೊಂದಲ)

ಶ್ರೀ ಬಿ. ರಮಾನಾಥ ರೈ:– ನಮ್ಮ ಇತಿಹಾಸದೊಳಗೆ ನಾವು ರೈತರ ಪರವಾಗಿರುವವರು.

(ಗೊಂದಲ)

ಶ್ರೀ ಸಿ.ಟಿ. ರವಿ:– ಮಂತ್ರಿಗಳಾಗಿ, ಪಂಚಾಯಿತಿ ಕಟ್ಟೆಯಲ್ಲಿ ಮಾತನಾಡಿದ ಹಾಗೆ ಮಾತನಾಡುತ್ತಿದ್ದಾರಲ್ಲಾ. ಇದೇನು ವಿಧಾನ ಸಭೆನಾ?

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ:– ಬಡವರ ಬಗ್ಗೆ ಮಾತನಾಡುತ್ತಿರುವಾಗ patience ನಿಂದ ಕೇಳಬೇಕು. ಅನ್ಯಾಯ

ಆಗಿರುವುದನ್ನು ಸರಿಪಡಿಸಬೇಕು. ಅದು ಮಂತ್ರಿತನ. ಅವರನ್ನು ಜನಪರ ಮಂತ್ರಿ ಎಂದು ಹೇಳುತ್ತಾರೆ.

(ಗೊಂದಲ)

ಶ್ರೀ ಬಿ. ರಮಾನಾಥ ರೈ:– ತಾವು ಉದ್ರೇಕ ಮಾಡಿ ಮಾತನಾಡುತ್ತಿದ್ದೀರಿ. ಇಷ್ಟು ದಿನ ಏಕೆ ಸುಮ್ಮನಿದ್ದೀರಿ?

ಶ್ರೀ ಎಂ.ಬಿ. ಪಾಟೀಲ್:– ಅವರ ಕುಟುಂಬದವರು ಬಹಳಷ್ಟು ತ್ಯಾಗ ಮಾಡಿದ್ದಾರೆ.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ:– ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ಉಪಾಧ್ಯಕ್ಷರೆ, ನಾನು yield ಆಗಿಲ್ಲ. ನಾನು ಏಕೆ ಹೇಳಿದೆ ಎನ್ನುವುದನ್ನು ಹೇಳುತ್ತೇನೆ ಕೇಳಿ.

ಶ್ರೀ ಬಿ. ರಮಾನಾಥ ರೈ:– ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಗೋವಿಂದ ಕಾಋಜೋಳರವರು ನನ್ನ ವೈಯಕ್ತಿಕ ವಿಚಾರವನ್ನು ಮಾತನಾಡಿದ್ದಾರೆ. ನಾನು ಅವರ ವೈಯಕ್ತಿಕ ವಿಚಾರವನ್ನು ಮಾತನಾಡಿಲ್ಲ. ಅವರು ಮಾತನಾಡಿರುವುದು ಕಡತದಲ್ಲಿದೆ. ನಮ್ಮ ಪ್ರಾಮಾಣಿಕತೆ ಬಗ್ಗೆ ಮಾತನಾಡಿದಾಗ ನಮಗೆ ನೋವಾಗುತ್ತದೆ. ಆ ಮಾತನ್ನು ಕಡತದಿಂದ ತೆಗೆಯಬೇಕು.

ಶ್ರೀ ಗೋವಿಂದ ಎಂ. ಕಾರಜೋಳ:– ಮಾನ್ಯ ಉಪಾಧ್ಯಕ್ಷರೆ, ಆ ವಿಷಯಗಳನ್ನು ಕಡತದಿಂದ ತೆಗೆಯಬಾರದು. ಆ ವಿಚಾರಗಳನ್ನು ಏತಕ್ಕೆ ಹೇಳಿದ್ದೇನೆಂಬ ಬಗ್ಗೆ ನಾನು justify ಮಾಡಿಕೊಳ್ಳುತ್ತೇನೆ.

ಶ್ರೀ ಬಿ. ರಮಾನಾಥ ರೈ:– ತಾವು ಆ ರೀತಿಯಲ್ಲ ಮಾತನಾಡಬಾರದು.

ಶ್ರೀ ಗೋವಿಂದ ಎಂ. ಕಾರಜೋಳ:– ನಮ್ಮ ತಂದೆ ಜಮೀನುದಾರರಾಗಿದ್ದ, ಆಗ ನಾವು ಬಡವರಿಗೆ ಜಮೀನನ್ನು ಹಂಚಿದ್ದೇವೆಂದು ಅವರು ಹೇಳಿದ್ದಕ್ಕೆ, ನಿಮ್ಮ ತಂದೆ–ತಾಯಿ ತಲೆಯ ಮೇಲೆ ಹೊತ್ತುಕೊಂಡು ಬಂದು ಕೊಟ್ಟಿರಬೇಕು. ನಾವು ದಲಿತರು ಹೊಲಗೇರಿಯಲ್ಲಿ ಹುಟ್ಟಿದವರು ನಾವೇನು ತಂದಿಲ್ಲ, ಕೇವಲ ಖಾಲಿ ಕೈಯಲ್ಲಿ ಬಂದಿದ್ದೇವೆ, ಇವರೆಲ್ಲರು ಬರುವಾಗ ಹೊತ್ತುಕೊಂಡು ಬಂದಿದ್ದಾರೆ.

ಶ್ರೀ ಬಿ. ರಮಾನಾಥ ರೈ:- ನಾವು ಬಡವರ ಪರವಾಗ ನಿಂತಿದ್ದೇವೆಂದು ಹೇಳಿದ್ದೇನೆ.

ಉಪಾಧ್ಯಕ್ಷರು:- ಮಾನ್ಯ ಸಚಿವರೇ, ಮಾನ್ಯ ಸದಸ್ಯರು ಮಾತನಾಡುವುದಕ್ಕೆ ಅವಕಾಶ ಕೊಡಿ.

ಶ್ರೀ ಗೋವಿಂದ ಎಂ. ಕಾರಜೋಳ:- ಮಾನ್ಯ ಸಚಿವರೇ, ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಉಪಾಧ್ಯಕ್ಷರು:- ಮಾನ್ಯ ಮಂತ್ರಿಗಳೇ, ಅವರು yield ಆಗಿಲ್ಲ. ತಾವು ದಯವಿಟ್ಟು ಕುಳಿತುಕೊಳ್ಳಿ. ಏಕೆ emotional ಆಗುತ್ತೀರಿ? ಮಾನ್ಯ ಗೋವಿಂದ ಕಾರಜೋಳರವರೆ, ತಾವು ಮಾತನಾಡಿ.

ಶ್ರೀ ಗೋವಿಂದ ಎಂ. ಕಾರಜೋಳ:- ಮಾನ್ಯ ಉಪಾಧ್ಯಕ್ಷರೇ, ನಾನು ಏನು ವಿಷಯವನ್ನು ಮಾತನಾಡುವುದಕ್ಕೆ ಹೊರಟಿದ್ದೇನೆಂದರೆ, 2002-03ನೇ ಸಾಲಿನಲ್ಲಿ ಸರ್ಕಾರ ಅವರಿಗೆ allotment ಮಾಡಿ ಹಕ್ಕುಪತ್ರವನ್ನು ಸಹ ಕೊಟ್ಟಿದ. Record of rights ಕೂಡ ಅವರ ಹೆಸರಿಗೆ change ಆಗಿದೆ. ಆದರೆ, ಅದನ್ನು ಬದಲಾವಣೆ ಮಾಡಿ . Forest ನವರು ಅದನ್ನು ಕಸಿದುಕೊಳ್ಳುತ್ತಾರೆಂದರೆ ಅದು ಯಾವ ನ್ಯಾಯ? ಅವರೇನು ಅಲ್ಲಿ ಅತಿಕ್ರಮಣ ಮಾಡಿಲ್ಲ.

ಉಪಾಧ್ಯಕ್ಷರು:- ಈಗ ಏನು ಮಾಡಬೇಕೆಂಬುದರ ಬಗ್ಗೆ ಸಲಹೆ ಕೊಡಿ.

ಶ್ರೀ ಗೋವಿಂದ ಎಂ. ಕಾರಜೋಳ:- ಮಾನ್ಯ ಉಪಾಧ್ಯಕ್ಷರೇ, ನನ್ನ ಸಲಹೆ ಏನೆಂದರೆ, ಬಡವರ ಮೇಲೆ ದೌರ್ಜನ್ಯ ಮಾಡಿರುವ ಅಧಿಕಾರಿಗಳ ಮೇಲೆ case register ಆಗಬೇಕು. ಹಾಗೆಯೇ ಅವರು ಎಷ್ಟೆಷ್ಟು ವರ್ಷಗಳಿಂದ ಯಾವ್ಯಾವ ಭೂಮಿಯಲ್ಲಿ ಅವರು possession ನಲ್ಲಿದ್ದಾರೆಯೋ ಅದೇ ಭೂಮಿಯನ್ನು ಅವರಿಗೆ ಕೊಡತಕ್ಕಂಥ ಕೆಲಸ ಇವತ್ತಿನ ದಿವಸ ಆಗಬೇಕು. ಇವರು ಏನೇನೊ ಮಾತನಾಡಿದರೆ ಹೇಗೆ? ಸರ್ಕಾರ ನಡೆಸುವವರು ಬಹಳ patience ನಿಂದ ಕೇಳಬೇಕು. ಸರ್ಕಾರ ನಡೆಸುವವರು ಇಲ್ಲಿ ಬಂದು ವೈಯಕ್ತಿಕ ವಿಚಾರಗಳನ್ನು ಹೇಳಿಕೊಳ್ಳುತ್ತಿದ್ದಾರೆ.

(ಗೊಂದಲ)

ಉಪಾಧ್ಯಕ್ಷರು:– ಮಾನ್ಯ ಗೋವಿಂದ ಕಾರಜೋಳರವರೇ, ತಾವು conclude ಮಾಡಿ.

ಶ್ರೀ ಗೋವಿಂದ ಎಂ. ಕಾರಜೋಳ:– ಮಾನ್ಯ ಉಪಾಧ್ಯಕ್ಷರೇ, ಸರ್ಕಾರಕ್ಕೆ ನನ್ನ ವಿನಂತಿ ಏನೆಂದರೆ, ಒಕ್ಕಲೆಬ್ಬಿಸಿರುವ ಬಡವರಿಗೆ ಮತ್ತೆ ಜಮೀನನ್ನು ಕೊಡಬೇಕು ಹಾಗೆಯೇ ಅವರಿಗೆ ಅನ್ಯಾಯವಾಗಿರುವುದನ್ನು ಸರಿಪಡಿಸಬೇಕು. Form No. 50 ರಲ್ಲಿ ಅರ್ಜಿ ಹಾಕುವುದಕ್ಕೆ ಅವಕಾಶ ಮಾಡುವುದಾದರೆ ಮತ್ತೆ ಅವರಿಗೆ ಅವಕಾಶ ಕೊಡಬೇಕು. ಯಾವ Land Grant Committee ರವರು ಬಿಜಾಪುರ ತಾಲ್ಲೂಕಿನ ಮಕಣಪುರದವರಿಗೆ ಕೊಟ್ಟಿರುವ ಜಮೀನನ್ನು ಈಗ ಏನು reject ಮಾಡಿದ್ದಾರೆಯೋ ಅದನ್ನು ಮತ್ತೆ ಅವರಿಗೇ ಕೊಡತಕ್ಕಂಥದಕ್ಕೆ ಅವಕಾಶ ಮಾಡಿಕೊಡಬೇಕು. ಏಕೆಂದರೆ, ಅವರೇನು ಹಾಗೆಯೇ ತೆಗೆದುಕೊಂಡಿಲ್ಲ. ಅತಿಕ್ರಮಣ ಕೂಡ ಮಾಡಿಲ್ಲ, unauthorized ಕೂಡ ಅಲ್ಲ. ಈ ಎರಡು ಪ್ರಕರಣಗಳಲ್ಲಿ ಸರ್ಕಾರದ Deputy Commissioner ರವರು ಕೊಟ್ಟಿದ್ದಾರೆ. ಆದ್ದರಿಂದ, ದಯಮಾಡಿ ಅವರಿಗೆ ಬಿಟ್ಟುಕೊಡುವಂಥ ಕೆಲಸವನ್ನು ಮಾಡಬೇಕೆಂದು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

ಉಪಾಧ್ಯಕ್ಷರು:– ಈಗ ಜಮೀನು ಒತ್ತುವರಿ ವಿಷಯಕ್ಕೆ ಸಂಬಂಧಪಟ್ಟ ಚರ್ಚೆ ಮುಗಿಯಿತು. ಈಗ ಮುಂದಿನ ವಿಷಯ ತೆಗೆದುಕೊಳ್ಳುತ್ತೇನೆ. ಮಾನ್ಯ ಸೋಮಶೇಖರ್‌ರವರೆ, ತಾವು ಮಾತನಾಡಿ.

ಶ್ರೀ ಎಸ್. ಚಿಕ್ಕಮಾದು:– ಮಾನ್ಯ ಉಪಾಧ್ಯಕ್ಷರೆ, ಆ ವಿಷಯದ ಬಗ್ಗೆ ನಾನು ಕೂಡ ಮಾತನಾಡಬೇಕಾಗಿದೆ. ಆದ್ದರಿಂದ, ಎರಡು ನಿಮಿಷ ಅವಕಾಶ ಕೊಡಿ. ನನ್ನ ಕ್ಷೇತ್ರದಲ್ಲಿ ಕೂಡ ನೋಟಿಸ್ ಜಾರಿ ಮಾಡಿದ್ದಾರೆ, ಜನರು ಅಲ್ಲಿ ಬದುಕುವುದಕ್ಕೆ ಆಗದೆ ವಿಷ ತೆಗೆದುಕೊಳ್ಳುವುದಕ್ಕೆ ಹೋಗುತ್ತಿದ್ದಾರೆ.

ಉಪಾಧ್ಯಕ್ಷರು:– ಮಾನ್ಯ ಚಿಕ್ಕಮಾದುರವರೆ, ಎರಡು ನಿಮಿಷದಲ್ಲಿ ಮಾತನಾಡಿ ಮುಗಿಸಿ.

ಶ್ರೀ ಎಸ್. ಚಿಕ್ಕಮಾದು (ಹೆಚ್.ಡಿ. ಕೋಟೆ):– ಮಾನ್ಯ ಉಪಾಧ್ಯಕ್ಷರೆ, ಈ ವಿಷಯದ ಬಗ್ಗೆ ಸಾಕಷ್ಟು ಚರ್ಚೆ ಅಗಿದೆ. ಈಗಾಗಲೇ ಹಿರಿಯರಾದ

ಮಾನ್ಯ ಗೋವಿಂದ ಕಾರಜೋಳರವರು ಸಹ ಮಾತನಾಡಿದ್ದಾರೆ. ಆದ್ದರಿಂದ, ಮತ್ತೆ ನಾನು ಚರ್ಚೆಗೆ ಹೋಗುವುದಿಲ್ಲ. ಈ ವಿಷಯದ ಬಗ್ಗೆ ಸರ್ಕಾರ ಒಂದು ದಿಟ್ಟವಾದ ನಿಲುವನ್ನು ತೆಗೆದುಕೊಳ್ಳಬೇಕಾಗುತ್ತದೆ. ದಿಟ್ಟವಾದ ನಿಲುವು ಏಕೆಂದರೆ ಅರಣ್ಯ ಮತ್ತ ಕಂದಾಯ ಇಲಾಖೆಯವರು ಸೇರಿಕೊಂಡು ಜಂಟಿ ಸರ್ವೆ ಮಾಡಿ ಅರಣ್ಯ ಭಾಗದಷ್ಟೇ trecnch ಮಾಡಿಕೊಂಡು boundary fix ಮಾಡಿಕೊಂಡರು. ಆ ಜಾಗವನ್ನು fix ಮಾಡಿಕೊಂಡ ಮೇಲೆ ಆ ಜಾಗ ಅರಣ್ಯಕ್ಕೆ ಸೇರಿಕೊಂಡಿತು. ಉಳಿದ ಭಾಗದಲ್ಲಿ ರೈತರು ಸುಮಾರು 70–80 ವರ್ಷಗಳಿಂದ ವ್ಯವಸಾಯವನ್ನು ಮಾಡಿಕೊಂಡು ಬರುತ್ತಿದ್ದರು. ನಮ್ಮ ಹೆಗ್ಗಡದೇವನ ಕೋಟೆಯ ತಾಲ್ಲೂಕಿನ ಭೂದನೂರು ಸರ್ವೆ ನಂ. 54 ರಲ್ಲಿ ಸುಮಾರು 300 ಕ್ಕಿಂಥ ಹೆಚ್ಚಿನ ಜಮೀನನ್ನು ಸರ್ಕಾರ ತಲಾ 2 ರಿಂದ 3 ಎಕರೆ ಜಮೀನನ್ನು ಮಂಜೂರಾತಿ ಮಾಡಿಕೊಂಡು ಬಂದಿದ್ದಾರೆ ಹಾಗೆಯೇ ಅದಕ್ಕೆ ಸಾಗುವಳಿ ಚೀಟಿ ಸಹ ಕೊಟ್ಟಿದ್ದಾರೆ. ಸಾಗುವಳಿ ಚೀಟಿ ಪಡೆದುಕೊಂಡಂಥ ರೈತರು 100 ಕ್ಕೆ 100 ರಷ್ಟು ಪರಿಶಿಷ್ಟ ಜನಾಂಗಕ್ಕ ಸೇರಿದವರಾಗಿದ್ದಾರೆ. ಅವರಿಗೆ ಕೊಳವೆ ಬಾವಿಯನ್ನು ಕೊರೆಸಿಕೊಟ್ಟಿದ್ದಾರೆ ಮತ್ತೆ drip irrigation ಮಾಡಿ ಕೊಟ್ಟಿದ್ದಾರೆ ಹಾಗೆಯೇ ನೀರಾವರಿ ಯೋಜನೆಯನ್ನು ಮಾಡಿಕೊಟ್ಟಿದ್ದಾರೆ. ಆ ಸರ್ವೆ ನಂಬರ್‌ನಲ್ಲಿ ಗ್ರಾಮ ಠಾಣವೆಂದು ನಿಗದಿ ಮಾಡಿ ಆ ಗ್ರಾಮ ಠಾಣದಲ್ಲಿ ಸುಮಾರು 100 ಮನೆಗಳನ್ನು ಸರ್ಕಾರ ವಿವಿಧ ಯೋಜನೆ ಅಡಿಯಲ್ಲಿ ಕಟ್ಟಿಕೊಟ್ಟಿದೆ. ಈಗ ಆ ಮನೆಗಳಲ್ಲಿ ವಾಸ ಇದ್ದುಕೊಂಡು ಅವರ ಜಮೀನುಗಳಲ್ಲಿ ವ್ಯವಸಾಯ ಮಾಡುತ್ತಿದ್ದಾರೆ. ಇವತ್ತಿನದಿವಸ ಅವರ ಜಮೀನಿನಲ್ಲಿ ತೆಂಗು, ಮಾವಿನ ಗಿಡಗಳಿದ್ದು ಈ ಗಡಿಗಳು ಫಸಲನ್ನು ಸಹ ಕೊಡುತ್ತಿವೆ. ಆದರೆ, ಕಳೆದ ತಿಂಗಳು 27ನೇ ತಾರೀಖಿನ ದಿವಸ ಏಕಾಏಕಿ ಅಲ್ಲಿಗೆ ಹೋಗಿ ಈ ಜಾಗವನ್ನು ನೀವು ತೆರವುಗೊಳಿಸಬೇಕು. ಅರಣ್ಯ ಜಾಗವನ್ನು ಒತ್ತುವರಿ ಮಾಡಿಕೊಂಡು ಈಗ ನೀವುಗಳು ಬೆಳೆಯನ್ನು ಬೆಳೆದಿದ್ದೀರಿ, ಇದು ಕಾನೂನು ಬಾಹಿರವಾಗಿದೆ. ಆದ್ದರಿಂದ, ನೀವೇ ಇವೆಲ್ಲವನ್ನು ತೆರವುಗೊಳಿಸಿಕೊಡಬೇಕು ಇಲ್ಲದಿದ್ದರೆ ನಾವೇ ಕ್ರಮ ಕೈಗೊಳ್ಳುತ್ತೇವೆಂದು ನೋಟಿಸ್ ಕೊಟ್ಟಿದ್ದಾರೆ. ಈ ವಿಚಾರಕ್ಕೆ ಸಂಬಂಧಟ್ಟಂತೆ ಮಾನ್ಯ ಮುಖ್ಯಮಂತ್ರಿಗಳನ್ನು 27ನೇ ತಾರೀಖಿನ ದಿವಸ ಭೇಟಿ ಮಾಡಿ ಯಾವುದೇ ಕಾರಣಕ್ಕೂ ತೆರವುಗೊಳಿಸಬಾರದೆಂಬ ಕಾರಣಕ್ಕೋಸ್ಕರ ಸಂಬಂಧಪಟ್ಟ ಇಲಾಖೆಯ ಮುಖ್ಯಸ್ಥರಿಗೆ ಫೋನ್ ಮಾಡಿಸಿ ತಾತ್ಕಾಲಿಕವಾಗ

ತಡೆಹಿಡಿಯಲಾಗಿದೆಯಷ್ಟೆ. ಆದರೆ, ಇವತ್ತಿನ ದಿವಸ ಇದರ ಬಗ್ಗೆ ಶಾಶ್ವತವಾಗಿ ಏನು ಮಾಡಬೇಕೆಂದು ತೀರ್ಮಾನ ಮಾಡಬೇಕು. ನಮ್ಮ ಹೆಗ್ಗಡದೇವ ಕೋಟೆ ಭಾಗದಲ್ಲಿ ಸುಮಾರು 4000 ಎಕರೆ ಜಮೀನಿನಲ್ಲಿ ಕಡು ಬಡವರು ಕುಳಿತುಕೊಂಡಿದ್ದಾರೆ. ಸರ್ಕಾರ ಒಂದು ವಿಷಯವನ್ನು ಅರ್ಥ ಮಾಡಿಕೊಳ್ಳಬೇಕು. ಅದೇನೆಂದರೆ, ಊರಿನ ಸುತ್ತಾಮುತ್ತಾ ಇರತಕ್ಕಂಥ ಫಲವತ್ತಾದ ವ್ಯವಸಾಯ ಭೂಮಿಯನ್ನು ಪ್ರಭಾವಿ ವ್ಯಕ್ತಿಗಳು ಇಟ್ಟುಕೊಂಡಿದ್ದಾರೆ. ಅದು ತಪ್ಪೋ ಸರಿಯೋ ನಮಗೆ ಗೊತ್ತಿಲ್ಲ. ಆದರೆ, ಇತ್ತೀಚೆಗೆ ಜೀತ ಪದ್ಧತಿ ವಿಮುಕ್ತಿ ಆದ ಮೇಲೆ ಅಲ್ಲಿ ಕೆಲಸ ಇಲ್ಲವೆಂದು ಇಂಥ ಕಾಡು ಪ್ರದೇಶಗಳಲ್ಲಿ ಹಿಂದುಳಿದ ಜನಾಂಗ, ಹರಿಜನ-ಗಿರಿಜನರು ಹೋಗಿ ಅಲ್ಲಿ ವ್ಯವಸಾಯ ಮಾಡಿಕೊಂಡು ಬರುತ್ತಿದ್ದಾರೆ. ಕೆಲವರಿಗೆ ಸಾಗುವಳಿ ಕೊಟ್ಟಿದ್ದಾರೆ. ಕೆಲವರಿಗೆ ಸಾಗುವಳಿ ಕೊಟ್ಟಿಲ್ಲ. ಇಂಥ ಸಂದರ್ಭದಲ್ಲಿ ಒತ್ತುವರಿಯನ್ನು ತೆರವುಗೊಳಿಸಿದರೆ ಅವರೆಲ್ಲರೂ ಎಲ್ಲಿಗೆ ಹೋಗುತ್ತಾರೆ? ಈಗ ಮತ್ತೆ ಜೀತಕ್ಕೆ ಇಟ್ಟುಕೊಳ್ಳುವುದಕ್ಕೆ ಆಗುವುದಿಲ್ಲ. ಏಕೆಂದರೆ, ಇವರೆಲ್ಲರೂ ಹಿಂದೆ ಬೇರೆ ಬೇರೆ ಮನೆಗಳಲ್ಲಿ ಜೀತದಲ್ಲಿದ್ದವರು ಆಗಿದ್ದಾರೆ. ಈಗ ಜೀತ ಬಿಟ್ಟ ಮೇಲೆ ಅವರು ಅರಣ್ಯದಲ್ಲಿ ಬಿಟ್ಟಂಥ ಭೂಮಿಯಲ್ಲಿ ವ್ಯವಸಾಯ ಮಾಡಿಕೊಂಡು ಬರುತ್ತಿರುವವರಿಗೆ ಮತ್ತೆ ಅಲ್ಲಿಂದ ಒಕ್ಕಲೆಬ್ಬಿಸುವಂಥ ಕೆಲಸ ಆದರೆ ಅವರ ಬದುಕು ಹೇಗೆ ಆಗುತ್ತದೆ? ಇದನ್ನು ಸರ್ಕಾರ ಅರ್ಥ ಮಾಡಿಕೊಳ್ಳಬೇಕು. ಈ ಸಂದರ್ಭದಲ್ಲಿ ನಾನು ಹೇಳುವುದೇನೆಂದರೆ, ಸರ್ಕಾರಕ್ಕೆ ಸಂಪೂರ್ಣವಾದ ಅಧಿಕಾರ ಇದೆ. ಇವತ್ತಿನ ದಿವಸ ಸಾವಿರಾರು ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಂಡು de-notify ಮಾಡುತ್ತಿದ್ದೀರಿ. ಕಂದಾಯ ಭೂಮಿಯನ್ನು ಒತ್ತುವರಿ ಮಾಡಿಕೊಂಡಿರುವವರಿಗೆ ಏಕೆ ಈ ರೀತಿ ಮಾಡುತ್ತೀರಿ. ಇವತ್ತಿನ ದಿವಸ ಕಾಗದದಲ್ಲಿ ಮಾತ್ರ ಅರಣ್ಯ ಭೂಮಿ ಎಂದು ಇದೆ. ಆದರೆ, ಆ ಜಾಗದಲ್ಲಿ ಅರಣ್ಯ ಇಲ್ಲ. ಬೇಕಾದರೆ ಬಂದು ಖುದ್ದಾಗಿ ನೋಡಲಿ. 2600 ಎಕರೆ ಜಮೀನಿನಲ್ಲಿ ಅರಣ್ಯಕ್ಕೆ ಸಂಬಂಧಪಟ್ಟ ಒಂದೇ ಒಂದು ಸಣ್ಣ ಗಿಡ ಸಹ ಇಲ್ಲ. ಅಲ್ಲಿರುವ ರೈತರು ಮಾವಿನ ಗಿಡ, ತೆಂಗಿನ ಗಿಡವನ್ನು ಬೆಳೆದು ಅಲ್ಲಿ ವ್ಯವಸಾಯವನ್ನು ಮಾಡಿಕೊಂಡು ಬರುತ್ತಿದ್ದಾರೆ. ನನ್ನ ದೃಷ್ಟಿಯಲ್ಲಿ ಸರ್ಕಾರ ಏನು ಮಾಡಬೇಕೆಂದರೆ, ಇಡೀ ಸದನ ಒಂದು ನಿರ್ಣಯ ಮಾಡಬೇಕು. ಅದೇನೆಂದರೆ, ಯಾವುದೇ ಜನಾಂಗಕ್ಕೆ ಸೇರಿದವರಾಗಲಿ ಪರವಾಗಿಲ್ಲ. ಒಟ್ಟಿನಲ್ಲಿ ಯಾರ್‍ಯಾರು ಸುಮಾರು 70-80 ವರ್ಷಗಳಿಂದ ವ್ಯವಸಾಯ

ಮಾಡಿಕೊಂಡು ಬರುತ್ತಿದ್ದರೆ ಆ ಜಮೀನನ್ನು ಅವರಿಗೇ ಕೊಡಬೇಕು. ಯಾರ್ಯಾರು ವ್ಯವಸಾಯ ಮಾಡಿಕೊಂಡು ಬರುತ್ತಿದ್ದಾರೆಂಬ ಬಗ್ಗೆ ನಿಮ್ಮ ಹತ್ತಿರ ಮಾಹಿತಿ ಇದೆ. ಹೆಚ್ಚು ಕಡಿಮೆ ನಮ್ಮಲ್ಲಿ ಬಂಡೀಪುರ ಅರಣ್ಯ ಭಾಗದಿಂದ ಹಿಡಿದು ಹೆಗ್ಗಡದೇವನ ಕೋಟೆಯ ವೀರಸನಹಳ್ಳಿಯವರಿಗೂ ಕೂಡ ಬಹುತೇಕವಾಗಿ ಸುಮಾರು 4600 ಎಕರೆ ಜಮೀನನ್ನು ಒತ್ತುವರಿ ಮಾಡಿಕೊಂಡಿದ್ದಾರೆಂದು ಅರಣ್ಯ ಇಲಾಖೆಯಲ್ಲಿ ಮಾಹಿತಿ ಇದೆ. ಇದನ್ನು ಕೇಂದ್ರ ಸರ್ಕಾರ ಮಾಡಬೇಕು. ನಾವು ಮಾಡುವುದಕ್ಕೆ ಬರುವುದಿಲ್ಲವೆಂದು ಸರ್ಕಾರ ಹೇಳಬಹುದು. ಆದರೆ, ನಾವು ಹೇಳುವುದೇನೆಂದರೆ, ಈ 4600 ಎಕರೆ ಜಮೀನನ್ನು de-notify ಮಾಡುವುದಕ್ಕೆ ರಾಜ್ಯ ಸರ್ಕಾರ ಒಂದು ನಿರ್ಣಯ ಮಾಡಿ ಎಂದು ಹೇಳುತ್ತೇನೆ. ಯಾರು ಸುಮಾರು 70–80 ವರ್ಷಗಳಿಂದ ಅಲ್ಲಿದ್ದುಕೊಂಡು ವ್ಯವಸಾಯ ಮಾಡಿಕೊಂಡು ಬರುತ್ತಿರುವ ಜಮೀನನ್ನು ಸಂಬಂಧಪಟ್ಟ ರೈತರಿಗೇ ಬಿಟ್ಟುಕೊಡಬೇಕು. ಈಗಾಗಲೇ ಅವರಿಗೆಲ್ಲಾ ಸಾಗುವಳಿ ಚೀಟಿ ಕೊಡಲಾಗಿದ್ದು ಈಗಾಗಲೇ ಅದೇ ಜಮೀನಿನಲ್ಲಿ ಅನುಭವದಲ್ಲಿದ್ದಾರೆಂದು ಹಾಗೆಯೇ ಅಲ್ಲಿ ಮನೆಗಳನ್ನು ಕಟ್ಟಿಕೊಮಡಿರುವುದರಿಂದ ಅವರಿಗೆ de-notify ಮಾಡಿಕೊಡಬೇಕೆಂದು ಕೇಂದ್ರ ಸರ್ಕಾರಕ್ಕೆ ಬರೆಯಿರಿ. ಇವರು ಏನು ತಪ್ಪು ಮಾಹಿತಿಯನ್ನು ಕೇಂದ್ರ ಸರ್ಕಾರಕ್ಕೆ ಕೊಡುತ್ತಾರೆಂದರೆ, ಅಲ್ಲಿ ಅರಣ್ಯ ಇದೆ ಎಂದು ದಾಖಲೆ ಕೊಡುತ್ತಾರೆ. ಆದರೆ, 4600 ಎಕರೆಯಲ್ಲಿ ಒಂದೇ ಒಂದು ಅರಣ್ಯದ ಗಿಡಗಳಿಲ್ಲ. ಆದ್ದರಿಂದ, ಸರ್ಕಾರ ಈ ಬಗ್ಗೆ ಕಟಿಬದ್ಧವಾದ ಒಂದು ತೀರ್ಮಾನವನ್ನು ತೆಗೆದುಕೊಂಡು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿ. ಅರಣ್ಯ ಭೂಮಿಯನ್ನು ಒತ್ತುವರಿ ಮಾಡಿಕೊಂಡಿರುವುದನ್ನು ಬಿಡಿ ಎಂದು ನಾವೇನು ಕೇಂದ್ರ ಸರ್ಕಾರಕ್ಕೆ ಕೇಳುತ್ತಿಲ್ಲ. ಇವರು ಬಿಟ್ಟಂಥ ಜಮೀನಿನಲ್ಲಿ ವ್ಯವಸಾಯ ಮಾಡಿಕೊಂಡು ಬರುತ್ತಿದ್ದಾರೆ. ಆದ್ದರಿಂದ, ಇದನ್ನು de-notify ಮಾಡಿಸುವುದಕ್ಕೆ ಸರ್ಕಾರಕ್ಕೆ ಏನು ತೊಂದರೆ ಇದೆ? ದಯಮಾಡಿ ಇಷ್ಟು ವಿಷಯಗಳನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ನಮಸ್ಕರಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು:– ಒತ್ತುವರಿ ವಿಷಯಕ್ಕೆ ಸಂಬಂಧಪಟ್ಟಂಥ ಚರ್ಚೆ ಮುಗಿಯಿತು.